ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 61 RNI Number : KNKAN/25/A2770 08-03-2026 Sunday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :61 ರಾಯಚೂರು 08-03-2026 ರವಿವಾರ ಪುಟ 04 ಬೆಲೆ ರೂ.2/- ಮೊ:8660146563

ದೊಡ್ಡ ಬಾಂಬ್ ದಾಳಿ ಎಚ್ಚರಿಕೆ ನೀಡಿದ ಅಮೆರಿಕ

ಟೆಹ್ರಾನ್ (ಇರಾನ್): ಇರಾನ್ – ಅಮೆರಿಕ, ಇಸ್ರೇಲ್ ನಡುವಿನ ಯುದ್ಧ ಆರಂಭವಾಗಿ ವಾರ ಕಳೆದಿದೆ. ಕೊಲ್ಲಿ ಯುದ್ಧದ ಬಿಸಿ ಜಾಗತಿಕವಾಗಿ ತಟ್ಟಿದೆ. ಹಾರ್ಮುಜ್ ಜಲಸಂಧಿ ಬಂದ್ ಆಗಿರುವ ಕಾರಣ ಏಷ್ಯಾ ದೇಶಗಳಲ್ಲಿ ತೈಲ ಬಿಕ್ಕಟ್ಟಿನ ಪರಿಸ್ಥಿತಿ ಎದುರಾಗಿದೆ. ಈ ನಡುವೆ ಅಮೆರಿಕ ಮತ್ತಷ್ಟು ದೊಡ್ಡದಾದ ಬಾಂಬ್ ದಾಳಿ ನಡೆಯಲಿದೆ ಎಂದು ಎಚ್ಚರಿಕೆ ಕೊಟ್ಟಿದೆ.

ಮಾಧ್ಯಮವೊಂದಕ್ಕೆ ಮಾತನಾಡಿರುವ ಅಮೆರಿಕದ ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್, ಈ ಯುದ್ಧದ ಅತಿದೊಡ್ಡ ಬಾಂಬ್ ದಾಳಿ ಇನ್ನೂ ಬರಬೇಕಿದೆ ಎಂದಿದ್ದು, ಇರಾನ್ ಬಂಕರ್ ಮೇಲೆ ಇಸ್ರೇಲ್ ದಾಳಿ ನಡೆಸಿರುವುದಾಗಿ ಹೇಳಿದ್ದಾರೆ. ಇದಕ್ಕೆ ಪ್ರತಿಯಾಗಿ ಎಚ್ಚರಿಕೆ ನೀಡಿರುವ ಇರಾನ್‌ನ ರೆವಲ್ಯೂಷನರಿ ಗಾರ್ಡ್, ಹಾರ್ಮುಜ್ ಜಲಸಂಧಿಯಲ್ಲಿ ಅಮೆರಿಕದ ಬೆಂಗಾವಲು ನೌಕೆಗಳಿಗಾಗಿ ತಾವು ಕಾದು ಕುಳಿತಿರುವುದಾಗಿ ಹೇಳಿದೆ.

ಹಾರ್ಮುಜ್ ಜಲಸಂಧಿ ಬಂದ್ ಆಗಿರುವ ಹಿನ್ನೆಲೆಯಲ್ಲಿ ಅಲ್ಲಿ ನಿಂತಿರುವ ಹಡಗುಗಳಿಗೆ ಬೆಂಗಾವಲು ನೀಡುವುದಾಗಿ ಈ ಹಿಂದೆ ಅಮೆರಿಕ ತಿಳಿಸಿತ್ತು. ಅಮೆರಿಕ ಇಂಧನ ಕಾರ್ಯದರ್ಶಿ ಕೂಡ ಸಾಧ್ಯವಾದಷ್ಟು ಬೇಗ ಜಲಸಂಧಿಯಲ್ಲಿ ಹಡಗುಗಳಿಗೆ ಬೆಂಗಾವಲು ನೀಡಲು ನೌಕಾಪಡೆ ಸಿದ್ಧತೆ ನಡೆಸುತ್ತಿದೆ ಎಂದಿದ್ದರು

ಈ ಹಿನ್ನೆಲೆಯಲ್ಲಿ ಹಾರ್ಮುಜ್ ಜಲಸಂಧಿಯ ಮೂಲಕ ಅಮೆರಿಕದ ಪಡೆಗಳು ಹಡಗುಗಳಿಗೆ ಬೆಂಗಾವಲು ನೀಡಲು ಕಾಯುತ್ತಿದ್ದೇವೆ. ಅವರ ಉಪಸ್ಥಿತಿಗಾಗಿ ನಾವು ಕಾದು ಕುಳಿತಿದ್ದೇವೆ ಎಂದು ಗಾರ್ಡ್ ವಕ್ತಾರ ಅಲಿ ಮೊಹಮ್ಮದ್ ನೈನಿ ತಿಳಿಸಿದ್ದಾರೆ.

ಯಾವುದೇ ನಿರ್ಧಾರ ತೆಗೆದುಕೊಳ್ಳುವ ಮೊದಲು 1987 ರಲ್ಲಿ ಅಮೆರಿಕದ ಸೂಪರ್ ಟ್ಯಾಂಕರ್ ಬ್ರಿಡ್ಜ್‌ಟನ್‌ನಲ್ಲಿ ಸಂಭವಿಸಿದ ಬೆಂಕಿ ಮತ್ತು ಇತ್ತೀಚೆಗೆ ದಾಳಿಗೊಳಗಾದ ತೈಲ ಟ್ಯಾಂಕರ್‌ಗಳನ್ನು ನೆನಪಿಸಿಕೊಳ್ಳುವಂತೆ ತಿಳಿಸಿದ್ದಾರೆ.

ಇಂದು ಟೆಹ್ರಾನ್ ಮೇಲೆ ಇಸ್ರೇಲ್ ವ್ಯಾಪಾಕ ದಾಳಿ ನಡೆಸಿದ್ದು, ರಾಜಧಾನಿಯಲ್ಲಿ ಸಾಕಷ್ಟು ಸ್ಫೋಟಗಳು ಸಂಭವಿಸಿವೆ. ಟೆಹ್ರಾನ್ ಇಸ್ರೇಲ್ ಮೇಲೆ ಕ್ಷಿಪಣಿಗಳನ್ನು ಹಾರಿಸುವ ಮೂಲಕ ಪ್ರತೀಕಾರ ತೀರಿಸಿಕೊಂಡಿದೆ.

ಶುಕ್ರವಾರ ಮಧ್ಯರಾತ್ರಿಯಿಂದ ಇರಾನ್, ಇಸ್ರೇಲ್ ಮೇಲೆ ಐದನೇ ಬಾರಿಗೆ ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಉಡಾಯಿಸಿದೆ. ಟೆಲ್ ಅವೀವ್ ಮತ್ತು ಮಧ್ಯ ಇಸ್ರೇಲ್‌ನ ಇತರ ಪ್ರದೇಶಗಳಲ್ಲಿ ಸೈರನ್‌ಗಳು ಮೊಳಗುತ್ತಿದ್ದವು. ಎಂದು ಐಡಿಎಫ್ ವರದಿ ಮಾಡಿದೆ.

ಗಲ್ಫ್ ಸುತ್ತಮುತ್ತಲಿನ ಗುರಿಗಳ ಮೇಲೆ ಇರಾನ್ ಪ್ರತೀಕಾರದ ದಾಳಿ



ಮುಂದುವರೆಸಿದ್ದು, ಇಂದು ದುಬೈ ಮತ್ತು ಬಹ್ರೇನ್‌ನ ರಾಜಧಾನಿ ಮನಾಮದಲ್ಲಿ ಸ್ಫೋಟದ ವರದಿಯಾಗಿದೆ. ದುಬೈನಲ್ಲಿ ಎರಡು ಮತ್ತು ಮನಾಮದಲ್ಲಿ ಒಂದು ಸ್ಫೋಟ ಸಂಭವಿಸಿದೆ. ದಾಳಿ ಬೆನ್ನಲ್ಲೇ ಬಹ್ರೇನ್ ಆಂತರಿಕ ಸಚಿವರು, ತಮ್ಮ ನಾಗರಿಕರು, ನಿವಾಸಿಗಳಿಗೆ ಸುರಕ್ಷಿತವಾಗಿರುವಂತೆ ತಿಳಿಸಿದ್ದು, ಶಾಂತವಾಗಿದ್ದು, ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಗೊಳ್ಳುವಂತೆ ಎಕ್ಸ್ ಜಾಲತಾಣದಲ್ಲಿ ತಿಳಿಸಿದ್ದಾರೆ.

ನವೋದಯ ಕಾಲೇಜು: ಸಾವಿತ್ರಿಬಾಯಿ ಪುಲೆ ಪುತ್ತಳಿ ಸ್ಥಾಪನೆಗೆ ಮನವಿ



ರಾಯಚೂರು, ಮಾ.7–

ನಗರದ ನವೋದಯ ಮೆಡಿಕಲ್ ಕಾಲೇಜ್ ಮುಂದೆ ಇರುವ ಸಾವಿತ್ರಿಬಾಯಿ ಪುಲೆ ಆವರ ಪುತ್ತಳಿ ಸ್ಥಾಪನೆ ಮಾಡಬೇಕು ಎಂದು ಆಗ್ರಹಿಸಿ ಅಖಂಡ ಕರ್ನಾಟಕ ಹೂಗಾರ ಮಹಾಸಭಾ ಹಾಗೂ ದಲಿತ ಮುಖಂಡರು ಮಹಾನಗರ ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದೆ.

ದಿ.6 ರಂದು ಮಹಾನಗರ ಪಾಲಿಕೆಯ ಅಧಿಕಾರಿ ಬಸವರಾಜ ಇವರು ನಗರದ ನವೋದಯ ಮೆಡಿಕಲ್ ಕಾಲೇಜ್ ಮುಂದೆ ಇರುವ ಸಾವಿತ್ರಿಬಾಯಿ ಪುಲೆ ಇವರ ನಾಮ ಫಲಕ ಇರುವ ಬೋರ್ಡ್‌ನ್ನು ಕಿತ್ತು ಹಾಕಲು ಬಂದಂತ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕು.

ಸುಮಾರು 6 ವರ್ಷಗಳ ಹಿಂದೆ ರಾಯಚೂರು ಲೋಕ ಸಭೆ ಸದಸ್ಯರು ಅಮರೇಶ್ವರ ನಾಯಕ ಹಾಗೂ ನಗರ ಶಾಸಕರು ಶಿವರಾಜ ಪಾಟೀಲ್ ಮತ್ತು ನಗರ ಸಭೆಯ ಅಧ್ಯಕ್ಷರು ವಿನಯಕುಮಾರು ಇವರು ಮತ್ತು ಸಮಾಜದ ಮುಖಂಡರ ನೇತೃತ್ವದಲ್ಲಿ ಅನಾವರಣಗೊಳಿಸಲಾಯಿತು.

ಇಂದಿಗೂ ಸಾವಿತ್ರಿಬಾಯಿ ಪುಲೆ ರವರ ಜಯಂತೋತ್ಸವ ಕಾರ್ಯಕ್ರಮನ್ನು ಅದೇ ಸ್ಥಳದಲ್ಲಿ ಮಾಡಿಕೊಂಡು ಬಂದಿದ್ದು ಮತ್ತು ನಗರ ಸಭೆಯಲ್ಲಿ ಜನರಲ್ ಮೀಟಿಂಗ್‌ನಲ್ಲಿ ಅಪ್ರುವಲ್ ಆಗಿದ್ದರಿಂದ ಈ ಒಂದು ನಾಮಪಲಕ ಮತ್ತು ಭಾವಚಿತ್ರ ಹೊಂದಿರು ಬೊರ್ಡನ್ನು ಅಳವಡಿಸಲಾಗಿತ್ತು. ಆದ್ದರಿಂದ ದಿ.6 ರಂದು ಜಿಲ್ಲಾ ಪಂಚಾಯತಿಯ ಅಧಿಕಾರಿಗಳು ಬಂದು ಪುತ್ತಳಿಯ ಸ್ಥಾಪನೆಗೆ ಎನ್.ಎಸ್ ಭೋಸರಾಜ್ ರವರು 5 ಲಕ್ಷ ಅನುದಾನ ಮತ್ತು ನಗರ ಶಾಸಕರಾದ ಡಾ.ಶಿವರಾಜ ಪಾಟೀಲ್ ರವರು 5 ಲಕ್ಷ ಅನುದಾನ

ಮೂರನೇಯ ಪುಟಕ್ಕೆ

ರಾಯಚೂರಿನಲ್ಲಿ ''ನಶಾ ಮುಕ್ತ ಭಾರತ ಯುವ ಶುದ್ಧಿ ಅಭಿಯಾನ ವಾಕಥಾನ್'' ಭವ್ಯ ಯಶಸ್ಸು





ರಾಯಚೂರು,ಮಾ.6–

ಯುವಕರಲ್ಲಿ ಮಾದಕ ವಸ್ತುಗಳ ವಿರುದ್ಧ ಜಾಗೃತಿ ಮೂಡಿಸಿ ಆರೋಗ್ಯಕರ ಸಮಾಜ ನಿರ್ಮಿಸುವ ಉದ್ದೇಶದಿಂದ ನಗರದ ಎಸ್.ಪಿ. ಪರೇಡ್ ಮೈದಾನದಲ್ಲಿ ಶುಕ್ರವಾರ ''ನಶಾ ಮುಕ್ತ ಭಾರತ ಯುವ ಶುದ್ಧಿ ಅಭಿಯಾನ ವಾಕಥಾನ್'' ಕಾರ್ಯಕ್ರಮ ಭವ್ಯವಾಗಿ ನಡೆಯಿತು. ಸಾವಿರಾರು ವಿದ್ಯಾರ್ಥಿಗಳು ಪಾಲ್ಗೊಂಡು ಮಾದಕ ವಸ್ತುಗಳ ವಿರುದ್ಧ ಜಾಗೃತಿ ಮೂಡಿಸುವ ಬಲವಾದ ಸಂದೇಶ ನೀಡಿದರು.

ಮೂರನೇಯ ಪುಟಕ್ಕೆ

ಬಜೆಟ್: ಬಸನಗೌಡ ಬಾದರ್ಲಿ ಮನವಿಗೆ ಮನ್ನಣೆ ನೀಡಿದ ಸಿಎಂ

ಸಿಂಧನೂರು,ಮಾ.07–

ವಿಧಾನಪರಿಷತ್ ಶಾಸಕರಾದ ಬಸನಗೌಡ ಬಾದರ್ಲಿ ಅವರ ಮನವಿ ಮೇರೆಗೆ. ಸಿಂಧನೂರು ತಾಲೂಕಿನ ಅಂಬಾಮಠದಲ್ಲಿ ವಸತಿಯುಕ್ತ ಕಾಲೇಜು ಸ್ಥಾಪನೆಗೆ ಮನವಿ ಮಾಡಿದ ಹಿನ್ನೆಲೆಯಲ್ಲಿ. 26–27ನೇ ಸಾಲಿನ.ಆಯವ್ಯೆಯ. (ಬಜೆಟ್) ಬಜೆಟ್ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅನುಮೋದನೆ ಗೊಳಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಮಂಡಿಸಿದ.. 2026 2027.ನೇ ಸಾಲಿನ. ಸಿಎಂ ಅವರು 17ನೇ ಬಜೆಟ್ ನಲ್ಲಿ. ವಿಧಾನಪರಿಷತ್ ಶಾಸಕರಾದ ಬಸನಗೌಡ ಬಾದರ್ಲಿ ಅವರ ಮನವಿ ಮೇರೆಗೆ. 18 ಕೋಟಿ ರೂ ವೆಚ್ಚದಲ್ಲಿ ಅಂಬಾಮಠದಲ್ಲಿ.ವಸತಿಯುಕ್ತ ಪ್ರಥಮ ದರ್ಜೆ ಕಾಲೇಜನ್ನು ನಿರ್ಮಾಣಕ್ಕೆ. ಬಜೆಟ್ ನಲ್ಲಿ ಆದೇಶ ನೀಡಲಾಗಿದೆ. ಅದೇ ರೀತಿ ವಿಧಾನ ಪರಿಷತ್ ಆದಿವೇಶನದಲ್ಲಿ ತುಂಗಭದ್ರಾ ಜಲಾಶಯದ 33 ಕ್ರಸ್ಟ್ ಗೇಟ್ ಗಳನ್ನು. ಬಸನಗೌಡ ಬಾದರ್ಲಿ ಅವರು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರಿಗೆ ಚುಕ್ಕೆ ಗುರುತಿನ ಪ್ರಶ್ನೆಯನ್ನು ಕೇಳಿದ್ದರು. ಇದರನ್ವಯ ಬಜೆಟ್ ನಲ್ಲಿ ಸೇರಿಸಲಾಗಿದೆ. ಮತ್ತು ಜಲಾಶಯದಲ್ಲಿ ಹೂಳೆ ತುಂಬಿಕೊಂಡಿದ್ದು. ಇದಕ್ಕೆ ಪರ್ಯಾಯವಾಗಿ ಕೊಪ್ಪಳ ಜಿಲ್ಲೆಯ ನವಲಿ ಸಮಾನಾಂತರ ಜಲಾಶಯ ನಿರ್ಮಾಣಕ್ಕೆ ಸರ್ಕಾರ ಮುಂದಾಗಿದೆ ಎಂದರು. ತಾಲೂಕಿನ ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟ ಜಾತಿ ವಿದ್ಯಾರ್ಥಿ ನಿಲಯಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಬಜೆಟ್ ನಲ್ಲಿ ಅನುದಾನ ಮೀಸಲಿಡಲಾಗಿದೆ. ಜಿಲ್ಲೆ ಮತ್ತು ತಾಲೂಕಿನಲ್ಲಿ ಮಾದಕ ವಸ್ತುಗಳ ಕಳ್ಳ ಸಾಗಾಣಿಕೆ ಹಾಗೂ ಮಾರಾಟವನ್ನು ಪೂರ್ಣವಾಗಿ ನಿಯಂತ್ರಿಸಲು ಮಾದಕ ದ್ರವದ ಕಾರ್ಯಪಡೆ. ಅಂಟಿ. ನಾರ್ಕೋ..ಟಿಕ್ಸ್. ಟಾಸ್ಕ್ ಫೋರ್ಸ್. ಘಟಕವನ್ನು ಬಲಪಡಿಸಲು ಅನುದಾನ ನೀಡಲಾಗಿದೆ. ರಾಯಚೂರು ಜಿಲ್ಲೆಯ ಕಲ್ಮಲಾ. ಮತ್ತು ಸಿಂಧನೂರು ರಸ್ತೆಯ.ಒಟ್ಟು 73 ಕಿ.ಮೀ ಇದ್ದು. ಇದರೆ. ಇದರಲ್ಲಿ.60 ಕಿಲೋಮೀಟ.ರ್ ಕಾಮಗಾರಿ



ಮೂರನೇಯ ಪುಟಕ್ಕೆ



ರಾಯಚೂರಿನ ವಿದ್ಯಾಶ್ರೀಗೆ ಚಿನ್ನದ ಪದಕ

ರಾಯಚೂರು,ಮಾ.07–

ನಗರದ ನವೋದಯ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ಇಂಜಿನಿಯರಿಂಗ್ (ಇಸಿಇ) ವಿಭಾಗದಲ್ಲಿ ವಿದ್ಯಾರ್ಥಿನಿ ಕಂದುಕೂರಿ ವಿದ್ಯಾಶ್ರೀ ಪ್ರಥಮ ಸ್ಥಾನ ಪಡೆದು ಚಿನ್ನದ ಪದಕ ಗಳಿಸಿ ಕಾಲೇಜು ಹಾಗೂ ಜಿಲ್ಲೆಯ ಗೌರವ ಹೆಚ್ಚಿಸಿದ್ದಾರೆ.

ಬಿಇ ಪದವಿ ಶಿಕ್ಷಣದಲ್ಲಿ ಉತ್ತಮ ಶೈಕ್ಷಣಿಕ ಸಾಧನೆ ತೋರಿದ ವಿದ್ಯಾಶ್ರೀ ಅವರು ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ಇಂಜಿನಿಯರಿಂಗ್ ವಿಭಾಗದಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದು ಪ್ರಥಮ ಸ್ಥಾನವನ್ನು ಪಡೆದುಕೊಂಡಿದ್ದಾರೆ. ತಮ್ಮ ಪರಿಶ್ರಮ, ನಿಷ್ಠೆ ಮತ್ತು ನಿಯಮಿತ ಅಧ್ಯಯನದ ಮೂಲಕ ಈ ಸಾಧನೆಯನ್ನು ಮಾಡಿರುವುದರಿಂದ ವಿದ್ಯಾರ್ಥಿನಿಯ ಸಾಧನೆಗೆ ಕಾಲೇಜಿನ

ಮೂರನೇಯ ಪುಟಕ್ಕೆ



ಒಳ ಮೀಸಲಾತಿ ಐಕ್ಯ ಹೋರಾಟ ಸಮಿತಿಯಿಂದ ಬೃಹತ್ ಪ್ರತಿಭಟನೆ

ಮಾನ್ವಿ,ಮಾ.06–

ಒಳಮೀಸಲಾತಿ ಜಾರಿಗೊಳಿಸುವಂತೆ ಒತ್ತಾಯಿಸಿ ಒಳ ಮೀಸಲಾತಿ ಐಕ್ಯ ಸಮಿತಿಯಿಂದ ರಸ್ತೆ ತಡೆ ನಡೆಸಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಯಿತು.

ಪಟ್ಟಣದ ಬಸವ ವೃತ್ತದಲ್ಲಿ ಒಳ ಮೀಸಲಾತಿ ಐಕ್ಯ ಹೋರಾಟ ಸಮಿತಿ ಮಾನ್ವಿ ವತಿಯಿಂದ ಮುಖ್ಯಮಂತ್ರಿಗಳಿಗೆ ಗ್ರೇಡ್–2 ತಹಶೀಲ್ದಾರ್ ಅಬ್ದುಲ್ ವಾಹಿದ್ ರವರ ಮೂಲಕ ಮನವಿ ಸಲ್ಲಿಸಿ ಹಿರಿಯ ದಲಿತಪರ ಮುಖಂಡರಾದ ಎ.ಬಾಲಸ್ವಾಮಿ ಕೋಡ್ಲಿ ಮನವಿ ಸಲ್ಲಿಸಿ ಮಾತನಾಡಿ ರಾಜ್ಯದಲ್ಲಿ ಶೇ18 ರಷ್ಟಿರುವ ದಲಿತರ ಹಕ್ಕುಗಳ ಸಂರಕ್ಷಣೆಗಾಗಿ ಸರ್ಕಾರವೇ ನೇಮಕ ಮಾಡಿರುವ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್ ರವರು ರಾಜ್ಯದಲ್ಲಿನ ಪರಿಶೀಷ್ಟ ಜಾತಿಗಳ ಮೀಸಲಾತಿಯನ್ನು ಶೇ17ಕ್ಕೆ ಹೆಚ್ಚಿಸಲು ಶಿಫಾರಸ್ಸು ಮಾಡಿರುತ್ತಾರೆ ರಾಜ್ಯ ಸರ್ಕಾರ ಮಂಡಿಸಿದ ಒಳಮಿಸಲಾತಿ ವಿದೇಯಕಕ್ಕೆ ರಾಜ್ಯಪಾಲರ ಸಹಿ ಪಡೆದು ಅನುಮೋದನೆ ಗೊಂಡಿದ್ದರು ಕೂಡ ರಾಜ್ಯ ಸರ್ಕಾರವು ಒಳಮೀಸಲಾತಿಯನ್ನು ಹೊರತುಪಡಿಸಿ ರಾಜ್ಯದಲ್ಲಿ 56,432

ಮೂರನೇಯ ಪುಟಕ್ಕೆ

ಯಂಕಪ್ಪ ಫಿರಂಗಿ: ಸರಕಾರಿ ಪ್ರೌಢಶಾಲೆ ಪೋಲೀಸ್ ಕಾಲೋನಿ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಬೀಳ್ಕೋಡುಗೆ

ರಾಯಚೂರು,ಮಾ.07–


ಇಂದು ಸರಕಾರಿ ಪ್ರೌಢ ಶಾಲೆ ಪೋಲೀಸ್ ಕಾಲೋನಿ ರಾಯಚೂರು ಶಾಲೆಯಲ್ಲಿ ಹತ್ತನೆಯ ತರಗತಿ ಮಕ್ಕಳಿಗೆ ಸರಸ್ವತಿ ಪೂಜೆ ಕಾರ್ಯಕ್ರಮ ಮತ್ತು ಬೀಳ್ಕೋಡಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು ಸದ್ರಿ ಕಾರ್ಯಕ್ರಮವು ಶಾಲಾ ವಿದ್ಯಾರ್ಥಿಗಳಿಂದ ಸರಸ್ವತಿ ಪೂಜೆಯನ್ನು ಮಾಡುವ ಮೂಲಕ ಪ್ರಾರಂಬಿಸಿದರು . ಈ ಕಾರ್ಯಕ್ರಮದಲ್ಲಿ ಮೊದಲಿಗೆ ಪ್ರಾಸ್ತಾವಿಕ ಭಾಷಣವನ್ನು ಶ್ರೀ ನಿಂಗಪ್ಪ ಮುಖ್ಯೋಪಾಧ್ಯಾಯರವರು ಕಳೆದ ಸಾಲಿನಲ್ಲಿ ಸುಮಾರು ಆರು ವಿದ್ಯಾರ್ಥಿಗಳು ಅತಿ ಹೆಚ್ಚಿನ ಅಂಕಗಳನ್ನು ಪಡೆದು ಶಾಲೆಯ ಕೀರ್ತಿ ಹೆಚ್ಚಿಸಿದ್ದರು ಅದರಂತೆ ಈ ವರ್ಷವೂ ಹತ್ತನೇ ತರಗತಿಯ ವಿದ್ಯಾರ್ಥಿಗಳು ಅತಿ ಹೆಚ್ಚು ಅಂಕಗಳನ್ನು ಪಡೆದು ಶಾಲೆಗೆ ಮತ್ತು ಪಾಲಕರು, ಶಿಕ್ಷಕರಿಗೆ ಗೌರವ ಪಾತ್ರರಾಗಲು ತಿಳಿಸಿದರು. ಅಲ್ಲದೇ ಮುಖ್ಯ ಅತಿಥಿ . ಶ್ರೀ ಶಾಂತ ವೀರ ಸರ್ ರಾಯಚೂರು ರವರು ಮಾತನಾಡಿ ನಾನು ಸರಕಾರಿ ಶಾಲೆಯಲ್ಲಿ ವಿದ್ಯಾಭ್ಯಾಸ ಮುಗಿಸಿ ಇಂದು ಉನ್ನತ ಹುದ್ದೆಯನ್ನು ಅಲಂಕರಿಸುವೆ ಅದರಂತೆ ನೀವುಗಳು ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆದು ಪಾಲಕರು ಮತ್ತು ಶಾಲೆಯ ಗುರುಗಳಿಗೆ ಪ್ರೀತಿಯ ಪಾತ್ರರಾಗಿರಿ ಎಂದು ಮಾರ್ಗದರ್ಶನ ನೀಡಿದರು ಅಲ್ಲದೇ ಒಂದು ಸಣ್ಣ ಕಥೆ ಹೇಳುವ ಮೂಲಕ ಮಕ್ಕಳಿಗೆ ಮಾದರಿ ಅಗಲು ತಿಳಿಸಿದರು ಮತ್ತು ಹತ್ತನೆ ತರಗತಿಯಲ್ಲಿ ಅತಿ ಹೆಚ್ಚು ಅಂಕ ಪಡೆದವರಿಗೆ ಬಹುಮಾನ ಘೋಷಿಸಿದರು. ನಂತರದಲ್ಲಿ ಶ್ರೀ ಬದೋಲಿ ಮುಖ್ಯೋಪಾಧ್ಯಾಯ ಸರ್ ಮತಾನಾಡಿ ಪರೀಕ್ಷೆ ಸಮಯ ಇರುವುದರಿಂದ ಸಮಯವನ್ನು ವ್ಯರ್ಥ ಮಾಡಬಾರದೆಂದು ಸಲಹೆಯನ್ನು ನೀಡಿದರು.



ಇನ್ನೋರ್ವ ಅತಿಥಿಗಳು ಶ್ರೀ ಮತಿ ಕವಿತಾ ಕಾಂಬ್ಳೆ ಮಾತಾನಾಡಿ ನಾನು ವಿದ್ಯಾರ್ಥ ಜೀವನದಿಂದ ಸಾಕಷ್ಟು ಕಷ್ಟ ಪಟ್ಟು ವಿದ್ಯಾಭ್ಯಾಸವನ್ನು ಮಾಡಿರುವೆ

ಮೂರನೇಯ ಪುಟಕ್ಕೆ

ನವೋದಯ ಕಾಲೇಜು: ಸಾವಿತ್ರಿಬಾಯಿ ಪುಲೆ ಪುತ್ತಳಿ ಸ್ಥಾಪನೆಗೆ ಮನವಿ



ರಾಯಚೂರು, ಮಾ.7–

ನಗರದ ನವೋದಯ ಮೆಡಿಕಲ್ ಕಾಲೇಜ್ ಮುಂದೆ ಇರುವ ಸಾವಿತ್ರಿಬಾಯಿ ಪುಲೆ ಆವರ ಪುತ್ತಳಿ ಸ್ಥಾಪನೆ ಮಾಡಬೇಕು ಎಂದು ಆಗ್ರಹಿಸಿ ಅಖಂಡ ಕರ್ನಾಟಕ ಹೂಗಾರ ಮಹಾಸಭಾ ಹಾಗೂ ದಲಿತ ಮುಖಂಡರು ಮಹಾನಗರ ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದೆ.

ದಿ.6 ರಂದು ಮಹಾನಗರ ಪಾಲಿಕೆಯ ಅಧಿಕಾರಿ ಬಸವರಾಜ ಇವರು ನಗರದ ನವೋದಯ ಮೆಡಿಕಲ್ ಕಾಲೇಜ್ ಮುಂದೆ ಇರುವ ಸಾವಿತ್ರಿಬಾಯಿ ಪುಲೆ ಇವರ ನಾಮ ಫಲಕ ಇರುವ ಬೋರ್ಡ್‌ನ್ನು ಕಿತ್ತು ಹಾಕಲು ಬಂದಂತ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕು.

ಸುಮಾರು 6 ವರ್ಷಗಳ ಹಿಂದೆ ರಾಯಚೂರು ಲೋಕ ಸಭೆ ಸದಸ್ಯರು ಅಮರೇಶ್ವರ ನಾಯಕ ಹಾಗೂ ನಗರ ಶಾಸಕರು ಶಿವರಾಜ ಪಾಟೀಲ್ ಮತ್ತು ನಗರ ಸಭೆಯ ಅಧ್ಯಕ್ಷರು ವಿನಯಕುಮಾರು ಇವರು ಮತ್ತು ಸಮಾಜದ ಮುಖಂಡರ ನೇತೃತ್ವದಲ್ಲಿ ಅನಾವರಣಗೊಳಿಸಲಾಯಿತು.

ಇಂದಿಗೂ ಸಾವಿತ್ರಿಬಾಯಿ ಪುಲೆ ರವರ ಜಯಂತೋತ್ಸವ ಕಾರ್ಯಕ್ರಮನ್ನು ಅದೇ ಸ್ಥಳದಲ್ಲಿ ಮಾಡಿಕೊಂಡು ಬಂದಿದ್ದು ಮತ್ತು ನಗರ ಸಭೆಯಲ್ಲಿ ಜನರಲ್ ಮೀಟಿಂಗ್‌ನಲ್ಲಿ ಅಪ್ರುವಲ್ ಆಗಿದ್ದರಿಂದ ಈ ಒಂದು ನಾಮಪಲಕ ಮತ್ತು ಭಾವಚಿತ್ರ ಹೊಂದಿರು ಬೊರ್ಡನ್ನು ಅಳವಡಿಸಲಾಗಿತ್ತು. ಆದ್ದರಿಂದ ದಿ.6 ರಂದು ಜಿಲ್ಲಾ ಪಂಚಾಯತಿಯ ಅಧಿಕಾರಿಗಳು ಬಂದು ಪುತ್ತಳಿಯ ಸ್ಥಾಪನೆಗೆ ಎನ್.ಎಸ್ ಭೋಸರಾಜ್ ರವರು 5 ಲಕ್ಷ ಅನುದಾನ ಮತ್ತು ನಗರ ಶಾಸಕರಾದ ಡಾ.ಶಿವರಾಜ ಪಾಟೀಲ್ ರವರು 5 ಲಕ್ಷ ಅನುದಾನ ಮಂಜೂರು ಮಾಡಿದ್ದಾರೆ.ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತಿಯ ಜೆ.ಇ ಮಹೇಶ ರವರು ಅಳತೆ ಮಾಡುವ ಸಂದರ್ಭದಲ್ಲಿ ಆ ಜಾಗದ ಮಾಲೀಕರು ತಕರಾರು ಮಾಡಿದ್ದು ಇರುತ್ತದೆ. ಆದ್ದರಿಂದ ಈ ದೇಶದ ಪ್ರಥಮ ಮಹಿಳಾ ಶಿಕ್ಷಕಿಯಾದ ಸಾವಿತ್ರಿಬಾಯಿ ಪುಲೆ ರವರಿಗೆ ಅವಮಾನ ಮಾಡಿದಕ್ಕೆ ಅವರ ಮೇಲೆ ಕಾನೂನು ಕ್ರಮ ತೆಗೆದುಕೊ ಳ್ಳಬೇಕು ಮತ್ತು ನಗರದ ಎಲ್ಲಾ ಸಮುದಾಯದ ಜನರು ಮತ್ತು ಸಾವಿತ್ರಿಬಾಯಿ ಪುಲೆ ಅಭಿಮಾನಿಗಳು ಜಯಂತೊತ್ಸವ ಮಾಡುವುದಕ್ಕೆ ಮತ್ತು ಜೀವನದಲ್ಲಿ ಅವರ ಆದರ್ಶನ ಉಳಿವಿಗಾಗಿ ತಾವು ಪುತ್ತಳಿ ಸ್ಥಾಪನೆಗೆ ಅವಕಾಶ ಮಾಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ರವೀಂದ್ರ ಜಾಲ್ದಾರ ರಾಘವೇಂದ್ರ ಬೋರೆಡ್ಡಿ,ಮಹಿಳೆಯರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕುಡಿಯುವ ನೀರಿನ ಸಮಸ್ಯೆ ನಿರ್ವಹಣೆ ಸಭೆಯಲ್ಲಿ ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ಸೂಚನೆ

ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಅಭಾವ ಆಗದಂತೆ ಕ್ರಮ ಕೈಗೊಳ್ಳಿ

ವಿಜಯನಗರ, ಮಾ.07-

ಜಿಲ್ಲೆಯಲ್ಲಿ ದಿನೇ ದಿನೇ ಬೇಸಿಗೆ ತಾಪಮಾನ ಹೆಚ್ಚಾಗುತ್ತಿದ್ದು, ಜನ ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ 'ಕುಡಿಯುವ ನೀರಿನ ಸಮಸ್ಯೆ ನಿರ್ವಹಣೆ' ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಾದ್ಯಂತ ಮುಂದಿನ ದಿನಗಳಲ್ಲಿ ತೀವ್ರ ನೀರಿನ ಸಮಸ್ಯೆ ಎದುರಿಸುವ ಗ್ರಾಮ ಪಟ್ಟಿ ಮಾಡಲಾಗಿದ್ದು, ಇದರಲ್ಲಿ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ 16 ಗ್ರಾಮ ಪಂಚಾಯತಿಯಲ್ಲಿ 24 ಗ್ರಾಮ, ಹಡಗಲಿ ತಾಲ್ಲೂಕಿನ 13 ಗ್ರಾಂ.ಪಂ.ನಲ್ಲಿ 32, ಕೊಟ್ಟೂರು ತಾಲ್ಲೂಕಿನ 5 ಗ್ರಾಮ ಪಂಚಾಯತಿಯಲ್ಲಿ 8, ಹರಪನಹಳ್ಳಿ ತಾಲ್ಲೂಕಿನ 32 ಗ್ರಾಮ ಪಂಚಾಯತಿಗಳಲ್ಲಿ 58, ಹೊಸಪೇಟೆ ತಾಲ್ಲೂಕಿನ 13 ಗ್ರಾಮ ಪಂಚಾಯತಿಗಳ ಪೈಕಿ 19, ಕೂಡ್ಲಿಗಿ ತಾಲ್ಲೂಕಿನ 19 ಗ್ರಾಂ.ಪಂನಲ್ಲಿ 24 ಗ್ರಾಮಗಳಲ್ಲಿ ತೀವ್ರ ಕುಡಿಯುವ ನೀರಿನ ಬರ ಎದುರಿಸಲಿರುವ ಗ್ರಾಮಗಳು ಎಂದು ಗುರುತಿಸಲಾಗಿದೆ.

ಈ ನಿಟ್ಟಿನಲ್ಲಿ ಅಧಿಕಾರಿಗಳು ನೀರಿನ ಕೊರೆತೆಯುಂಟಾಗುವ ಗ್ರಾಮಗಳನ್ನು ಗುರುತಿಸಿ, ಅಂತಹ ಗ್ರಾಮಗಳಿಗೆ ಯಾವುದೇ ರೀತಿಯಲ್ಲಿ ನೀರಿನ ಸಮಸ್ಯೆಯಾಗದಂತೆ ಮುಂಜಾಗ್ರತಾ ಕ್ರಮವಹಿಸಬೇಕು. ಗ್ರಾಮೀಣ ಭಾಗದಲ್ಲಿ ಸರ್ಕಾರಿ ಕೊಳವೆಬಾವಿಗಳು ಬತ್ತಿ ಹೋಗಿದ್ದರೆ,

ತಕ್ಷಣವೇ ಗ್ರಾಮದ ಸುತ್ತಮುತ್ತಲಿರುವ ಖಾಸಗಿ ಕೊಳವೆಬಾವಿಗಳನ್ನು ಗುರುತಿಸಿ, ಬಾಡಿಗೆ ಆಧಾರದ ಮೇಲೆ ಪಡೆದು ಸಾರ್ವಜನಿಕರಿಗೆ ಸಮರ್ಪಕವಾಗಿ ನೀರು ಪೂರೈಸಬೇಕು. ಒಂದು ವೇಳೆ ಕೊಳವೆ ಬಾವಿ ಲಭ್ಯವಿಲ್ಲದಿದ್ದಲ್ಲಿ ನೀರಿನ ತೀವ್ರ ಅಭಾವವಿರುವ ಗ್ರಾಮಗಳಿಗೆ ಟ್ಯಾಂಕರ್ ಮೂಲಕ ಶುದ್ಧ ಕುಡಿಯುವ ನೀರನ್ನು ಪೂರೈಸಬೇಕು. ಮೋಟಾರ್ ಪಂಪ್ ದುರಸ್ಥಿ ಅಥವಾ ಪೈಪ್‌ಲೈನ್ ಸೋರಿಕೆಯಂತಹ ತಾಂತ್ರಿಕ ಸಮಸ್ಯೆಗಳು ಕಂಡುಬಂದರೆ ತಕ್ಷಣವೇ ದುರಸ್ಥಿಗೊಳಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಮುಂದಿನ ಏಪ್ರಿಲ್ ಮೇ ತಿಂಗಳಲ್ಲಿ ತಾಪಮಾನ ಮತ್ತಷ್ಟು ಹೆಚ್ಚಾಗಲಿದೆ. ಈ ನಿಟ್ಟಿನಲ್ಲಿ ಜಾನುವಾರುಗಳಿಗಾಗಿ ನೀರಿನ ತೊಟ್ಟಿ ನಿರ್ಮಿಸಲಾಗಿದೆ. ಆಯಕಟ್ಟಿನ ತೊಟ್ಟಿಗಳಲ್ಲಿ ಸದಾ ನೀರು ತುಂಬಿರುವಂತೆ ನೋಡಿಕೊಳ್ಳಬೇಕು. ಸಾರ್ವಜನಿಕ ಸ್ಥಳಗಳಾದ ಬಸ್ ನಿಲ್ದಾಣ, ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ, ಎಪಿಎಂಸಿ ಮಾರುಕಟ್ಟೆಗಳಲ್ಲಿ ಸಾರ್ವಜನಿಕರಿಗಾಗಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಅದರಲ್ಲೂ ಪ್ರಮುಖವಾಗಿ ಹಂಪಿ ಪ್ರವಾಸಿ ತಾಣವಾಗಿದ್ದು, ದೇಶ ವಿದೇಶಗಳಿಂದ ಪ್ರವಾಸಿಗರು ದಾಂಗುಡಿಯಿಡುವರು.



ಆದ್ದರಿಂದ ವಿರುಪಾಕ್ಷೇಶ್ವರ ದೇವಸ್ಥಾನ, ವಿಜಯ ವಿಠ್ಠಲ ದೇವಸ್ಥಾನ, ಮಹಾನವಮಿ ದಿಬ್ಬ ಸೇರಿದಂತೆ ಇನ್ನಿತರೆ ಪ್ರಮುಖ ಸ್ಥಳಗಳಲ್ಲಿ ಕುಡಿಯುವ ನೀರು ಮತ್ತು ಸಾಧ್ಯವಾದಲ್ಲಿ ವಿಶ್ರಾಂತಿ ಪಡೆಯಲು ನೆರಳಿನ ವ್ಯವಸ್ಥೆ ಮಾಡುವಂತೆ ಸಂಬಂಧಪಟ್ಟ ಇಲಾಖೆ ಅಧಿಕಾರಗಳಿಗೆ ತಿಳಿಸಿದ ಅವರು, ಹಂಪಿ ಪ್ರವಾಸಿ ತಾಣ ವ್ಯಾಪ್ತಿಯಲ್ಲಿ ಸಿಬ್ಬಂದಿ ಸಹಿತ ಅಂಬುಲೆನ್ಸ್ ನಿಯೋಜಿಸುವಂತೆ ಡಿಹೆಚ್‌ಓ ಅವರಿಗೆ ತಿಳಿಸಿದರು. ಬಿಸಿಲಿನ ತಾಪ ಹೆಚ್ಚಾಗುವುದರಿಂದ ಆರೋಗ್ಯದ ಮೇಲೆ ಸಾಕಷ್ಟು ಪರಿಣಾಮ ಬೀರಲಿದೆ. ಆದ್ದರಿಂದ ಆರೋಗ್ಯ ಇಲಾಖೆ ವತಿಯಿಂದ ಸಾರ್ವಜನಿಕರಲ್ಲಿ ಈ ಬಗ್ಗೆ ಅರಿವು ಮೂಡಿಸಬೇಕು. ನಗರ ಮತ್ತು ಗ್ರಾಮೀಣ ಭಾಗದ ಸ್ಥಳೀಯ ಆಡಳಿತ ಸಂಸ್ಥೆಗಳಿಂದ ಸ್ವಚ್ಚವಾಹಿನಿಗಳಲ್ಲಿ ಆಡಿಯೋ ಪ್ಲೇ ಮಾಡುವ ಮೂಲಕ ಹೆಚ್ಚಿನ ಜಾಗೃತಿ ಮೂಡಿಸಬೇಕು ಎಂದು ತಾಕೀತು ಮಾಡಿದರು ಇದಕ್ಕೆ ಅವರು ಸಕರಾತ್ಮಕವಾಗಿ ಸ್ಪಂದಿಸಿದರು. ಜಿಲ್ಲಾ ಪಂಚಾಯತ್ ಸಿಇಓ ನೋಂಗ್ಜಾಯ್ ಮಹ್ಮದ್ ಅಲಿ ಅಕ್ರಂ ಷಾ ಮಾತನಾಡಿ, ಹೊಸದಾಗಿ ಕೊಳವೆ ಬಾವಿ ಕೊರೆಯಿಸಲು ಯಾವುದೇ ಅನುದಾನ ಲಭ್ಯವಿರುವುದಿಲ್ಲ.

ಹಾಗಾಗಿ ಮೇಲಾಧಿಕಾರಿಗಳ ಪೂರ್ವಾನುಮತಿ ಇಲ್ಲದೇ ಕೊಳವೆ ಬಾವಿ ಕೊರೆಸುವಂತಿಲ್ಲ. ಒಂದು ವೇಳೆ ತೀರ ಅಗತ್ಯವಿದ್ದಲ್ಲಿ ಈ ಬಗ್ಗೆ ವರದಿ ಸಿದ್ದಪಡಿಸಿ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಈ ಬಗ್ಗೆ ಅಧಿಕಾರಿಗಳಿಗೆ ಯಾವುದೇ ರೀತಿಯ ಗೊಂದಲ ಅಥವಾ ಸಮಸ್ಯೆಗಳು ಉಂಟಾದಲ್ಲಿ ಮೇಲಾಧಿಕಾರಿಗಳನ್ನು ಸಂಪರ್ಕಿಸಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ, ಉಪವಿಭಾಗಾಧಿಕಾರಿ ವಿವೇಕಾನಂದ, ತಹಶೀಲ್ದಾರ್ ಶೃತಿ, ನಗರಸಭೆ ಪೌರಾಯುಕ್ತ ಶಿವಕುಮಾರ್, ನಗರಾಭಿವೃದ್ಧಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಮನೋಹರ್, ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಎಂಜಿನಿಯರ್‌ಗಳು ಉಪಸ್ಥಿತರಿದ್ದರು.




ಬೀದರ್ ಅಭಿವೃದ್ಧಿಗೆ ಬಜೆಟ್ ಸಂಭ್ರಮ: ರೂ.200 ಕೋಟಿ ಅನುದಾನದ ಐತಿಹಾಸಿಕ ಘೋಷಣೆ

ಬೀದರ, ಮಾ.7

ನಮ್ಮ ಹೆಮ್ಮೆಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರ 17ನೇ ದಾಖಲೆ ಬಜೆಟ್‌ನಲ್ಲಿಂದು ಬೀದರ್ ಜಿಲ್ಲೆಗೆ ಅಭಿವೃದ್ಧಿಯ ಮಹಾಪೂರವೇ ಹರಿದುಬಂದಿದೆ. ನಮ್ಮ ಭಾಗದ ಜನರ ಬಹುದಿನಗಳ ಬೇಡಿಕೆಗಳಿಗೆ ಸ್ಪಂದಿಸಿದ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರಿಗೆ ಹಾಗೂ ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್ ಅವರಿಗೆ ನಾನು ಕೋಟಿ ಕೋಟಿ ಧನ್ಯವಾದಗಳನ್ನು ಅರ್ಪಿಸುತ್ತೇನೆಂದು ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್ ಅವರು ತಿಳಿಸಿದ್ದಾರೆ. ಬಜೆಟ್‌ನ ಪ್ರಮುಖ ಮುಖ್ಯಾಂಶಗಳು: ಬೀದರ್ ಮಹಾನಗರ ಪಾಲಿಕೆಗೆ ರೂ.200 ಕೋಟಿ: ಬೀದರ್ ನಗರವು ಇತ್ತೀಚೆಗೆ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿತು. ಇದೀಗ ಮಹಾತ್ಮ ಗಾಂಧಿ ನಗರೋತ್ಥಾನ ಯೋಜನೆ 2.0 ರ ಅಡಿಯಲ್ಲಿ ನಗರದ ಮೂಲಸೌಕರ್ಯ, ರಸ್ತೆ, ಚರಂಡಿ ಮತ್ತು ಸಮಗ್ರ ಅಭಿವೃದ್ಧಿಗಾಗಿ ಬರೋಬ್ಬರಿ ರೂ.200 ಕೋಟಿ ವಿಶೇಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಇದು ನಮ್ಮ ನಗರದ ಚಿತ್ರಣವನ್ನೇ ಬದಲಿಸಲಿದೆ. ಹೊಸ ಹಜ್ ಭವನಗಳ ನಿರ್ಮಾಣ: ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ನಮ್ಮ ಸರ್ಕಾರ ಬದ್ಧವಾಗಿದೆ. ಹಜ್ ಯಾತ್ರಿಕರ ಅನುಕೂಲಕ್ಕಾಗಿ ಕಲಬುರಗಿ ಮತ್ತು ಹುಬ್ಬಳ್ಳಿ ನಗರಗಳಲ್ಲಿ ಸುಸಜ್ಜಿತವಾದ ನೂತನ ಹಜ್ ಭವನಗಳನ್ನು ನಿರ್ಮಿಸಲು ಬಜೆಟ್‌ನಲ್ಲಿ ಅನುಮೋದನೆ ನೀಡಲಾಗಿದೆ ಎಂದರು. ನಗರೋತ್ಥಾನ ಯೋಜನೆ ಹಂತ-4: ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನ ಹಂತ-4 ಯೋಜನೆಗೆ ಚಾಲನೆ ನೀಡಲಾಗಿದ್ದು, ರಾಜ್ಯಾದ್ಯಂತ ನಗರ ಪ್ರದೇಶಗಳ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಪಶುವೈದ್ಯಕೀಯ ಕ್ರಾಂತಿ: ಬೀದರ್ ಪಶುವೈದ್ಯಕೀಯ ಕಾಲೇಜಿನಲ್ಲಿ ರಾಜ್ಯದಲ್ಲೇ ಮೊಟ್ಟಮೊದಲ ಬಾರಿಗೆ ಸಿಟಿ ಸ್ಕ್ಯಾನ್ ಕೇಂದ್ರ ಸ್ಥಾಪನೆ ಹಾಗೂ ಬೀದರ್‌ನಲ್ಲಿ ಶ್ವಾನ ಜನ್ಮ ನಿಯಂತ್ರಣ ತರಬೇತಿ ಕೇಂದ್ರ ಸ್ಥಾಪನೆಗೆ ನಿರ್ಧರಿಸಲಾಗಿದೆ.

ಬೀದರ್ ಕ್ಷೇತ್ರದ ಶಾಸಕನಾಗಿ ಮತ್ತು ಸಚಿವನಾಗಿ, ಈ ಎಲ್ಲಾ ಅನುದಾನಗಳನ್ನು ಪ್ರಾಮಾಣಿಕವಾಗಿ ಬಳಸಿ ನಮ್ಮ ಜಿಲ್ಲೆಯನ್ನು ಮಾದರಿ ಜಿಲ್ಲೆಯನ್ನಾಗಿ ಮಾಡಲು ನಾನು ಶ್ರಮಿಸುತ್ತೇನೆಂದು ಸಚಿವರು ತಿಳಿಸಿದ್ದಾರೆ.

ಮಾ. 8ಕ್ಕೆ ಚಿತ್ತಾಪುರಕ್ಕೆ ಮುಖ್ಯಮಂತ್ರಿ: ಕಾರ್ಯಕ್ರಮ ಯಶಸ್ಸಿಗೆ ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಕಲಬುರಗಿ ಜಿಲ್ಲಾಧಿಕಾರಿ



ಕಲಬುರಗಿ,ಮಾ.07-

ಚಿತ್ತಾಪುರ ಪಟ್ಟಣದಲ್ಲಿ ಇದೇ ಮಾರ್ಚ್ 8 ರಂದು ಸಾವಿರಾರು ಕೋಟಿ ರೂ. ಮೊತ್ತದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಮಿಸುತ್ತಿದ್ದು, ಕಾರ್ಯಕ್ರಮ ಯಶಸ್ಸಿಗೆ ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳು ತಾಲೂಕಾ ಆಡಳಿತದೊಂದಿಗೆ ಸಮನ್ವಯ ಸಾಧಿಸಿ ಕಾರ್ಯಕ್ರಮ ಯಶಸ್ಸಿಗೆ ಅಗತ್ಯ ಪೂರ್ವ ಸಿದ್ಧತೆ ಕಾರ್ಯ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳಿಗೆ ಬಿ.ಫೌಝಿಯಾ ತರನ್ನುಮ್ ಸೂಚನೆ ನೀಡಿದರು.

ಶುಕ್ರವಾರ ತಮ್ಮ ಕಚೇರಿ ಸಭಾಂಗಣದಲ್ಲಿ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಅಧಿಕಾರಿಗಳನ್ನೊಳಗೊಂಡ ರಚಿಸಲಾದ ವಿವಿಧ ಸಮಿತಿ ಸದಸ್ಯರೊಂದಿಗೆ ಪೂರ್ವಭಾವಿ ಸಭೆ ನಡೆಸಿದ ಅವರು, ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಡಾ. ಮಲ್ಲಿಕಾರ್ಜುನ ಖರ್ಗೆ, ರಾಜ್ಯದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐ.ಟಿ-ಬಿ.ಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ ಖರ್ಗೆ ಸೇರಿದಂತೆ ಪ್ರದೇಶದ ಸಚಿವರುಗಳು, ಶಾಸಕರು, ಸಂಸದರು ಹಾಗೂ ಇತರೆ ಚುನಾಯಿತ ಜನಪ್ರತಿನಿಧಿಗಳು ಭಾಗವಹಿಸಲಿದ್ದು, ಶಿಷ್ಟಾಚಾರದಂತೆ ಮತ್ತು ಎಲ್ಲಿಯೂ ಲೋಪವಾಗದಂತೆ ಅಚ್ಚುಕಟ್ಟಾಗಿ ಕಾರ್ಯಕ್ರಮ ನೆರವೇರಿಸಬೇಕೆಂದರು.

ಕಾರ್ಯಕ್ರಮಕ್ಕೆ ತಾಲುಕಿನ ವಿವಿಧ ಭಾಗಗಳಿಂದ ಸುಮಾರು 10 ಸಾವಿರಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರುವುದರಿಂದ ಆಸನ ವ್ಯವಸ್ಥೆ, ಸಂಜಊರ್ಣ ಶಾಮಿಯಾನ ಇರುವಂತೆ ನೋಡಿಕೊಳಬೇಕು. ಕುಡಿಯುವ ನೀರಿನ ವ್ಯವಸ್ಥೆ, ಮೊಬೈಲ್ ಶೌಚಾಲಯ ವ್ಯವಸ್ಥೆ ಕಲ್ಪಿಸಬೇಕು. ವಿಶೇಷವಾಗಿ ಸಾರ್ವಜನಿಕರಿಗೆ ನೂಕು ನುಗ್ಗಲು ಆಗದಂತೆ ಊಟಕ್ಕೆ ಹೆಚ್ಚಿನ ಕೌಂಟರ್ ತೆರೆಯಬೇಕು. ಇನ್ನು ತಾಲೂಕಿನಿಂದ ವಿವಿಧ ಕಡೆಯಿಂದ ಜನರು ಆಗಮಿಸುವುದರಿಂದ ಬಸ್ ವ್ಯವಸ್ಥೆ ಕಲ್ಪಿಸಬೇಕು. ಬೇಸಿಗೆ ಸಮಯ ಇದಾಗಿರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಕುಡಿಯುವ ನೀರಿನ ಸೌಲಭ್ಯ ಇರುವಂತೆ ಅಧಿಕಾರಿಗಳು ಹೆಚ್ಚು ಮುತುವರ್ಜಿ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಹೇಳಿದರು.

ಗಣ್ಯಾತಿಗಣ್ಯರು ಕಾರ್ಯಕ್ರಮದಲ್ಲಿ ಭಾಗಿಯಾಗುವುದರಿಂದ ಪೊಲೀಸ್ ಇಲಾಖೆಯು ಸೂಕ್ತ ಪೊಲೀಸ್ ಭದ್ರತೆ ಮತ್ತು ಪಾರ್ಕಿಂಗ್ ವ್ಯವಸ್ಥೆ ಸುಗಮವಾಗಿ ನಿರ್ವಹಣೆ ಮಾಡಬೇಕು. ಇನ್ನು ಕಾರ್ಯಕ್ರಮ ಯಶಸ್ಸಿಗೆ ವಿವಿಧ ಸಮಿತಿಗಳು ರಚಿಸಲಾಗಿ ಅಧಿಕಾರಿಗಳಿಗೆ ಜವಾಬ್ದಾರಿ ನೀಡಲಾಗಿದೆ. ಆಯಾ ಅಧಿಕಾರಿಗಳು ತಮಗೆ ನೀಡಿದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಬೇಕು ಎಂದು ಡಿಸಿ ನಿರ್ದೇಶನ ನೀಡಿದರು.

ಕಾರ್ಯಕ್ರಮದಲ್ಲಿ 20ಕ್ಕೂ ಹೆಚ್ಚಿನ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳು ಉದ್ಘಾಟನೆ ಮತ್ತು ಶಂಕುಸ್ಥಾಪನೆ ನಡೆಯಲಿದೆ. ಹೀಗಾಗಿ ಆಯಾ ಇಲಾಖೆಯ ಅಧಿಕಾರಿಗಳು ಆಮಂತ್ರಣ ಪತ್ರಿಕೆಯನ್ನು ಶಿಷ್ಟಾಚಾರದಂತೆ ಮುದ್ರಿಸಿ ಚುನಾಯಿತ ಜನಪ್ರತಿನಿಧಿಗಳಿಗೆ ಮತ್ತು ಇಲಾಖೆಯ ಸಚಿವರು ಮತ್ತು ಹಿರಿಯ ಅಧಿಕಾರಿಗಳಿಗೆ ತಲುಪಿಸಬೇಕು. ಸಚಿವರು ಮತ್ತು ಇಲಾಖೆಯ ಹಿರಿಯ ಅಧಿಕಾರಿಗಳು ಕಾರ್ಯಕ್ರಮಕ್ಕೆ ಆಗಮಿಸಿದಲ್ಲಿ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಲೈಸನ್ ಅಧಿಕಾರಿಯಾಗಿ ಕಾರ್ಯನಿರ್ವಹಿಸಬೇಕು ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಎಸ್.ಪಿ. ಅಡ್ಡೂರು ಶ್ರೀನಿವಾಸುಲು, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಸಹಾಯಕ ಆಯುಕ್ತರಾದ ಸಾಹಿತ್ಯಾ ಆಲದಕಟ್ಟಿ, ಪ್ರಭುರೆಡ್ಡಿ, ಚಿತ್ತಾಪುರ ತಹಶೀಲ್ದಾರ ನಾಗಯ್ಯ ಹಿರೇಮಠ ಸೇರಿದಂತೆ ಇತರೆ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

ಅಭಿವೃದ್ಧಿಗೆ ಹೊಸ ದಿಕ್ಕು ನೀಡುವಂತಹ ಅವಿಸ್ಮರಣೀಯ ಬಜೆಟ್ : ಶರಣಪ್ಪ ಸಲಾದಪುರ

ಯಾದಗಿರಿ ,ಮಾ.07-

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ ಐತಿಹಾಸಿಕ 17ನೇ ಬಜೆಟ್ ರಾಜ್ಯದ ಅಭಿವೃದ್ಧಿಗೆ ಹೊಸ ದಿಕ್ಕು ನೀಡುವಂತಹ ಮಹತ್ವದ ಹಾಗೂ ಅವಿಸ್ಮರಣೀಯ ಬಜೆಟ್ ಎಂದು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷರಾದ ಶರಣಪ್ಪ ಸಲಾದಪುರ ಹೇಳಿದ್ದಾರೆ.

ಈ ಬಜೆಟ್‌ನಲ್ಲಿ ಸಮಾಜದ ಎಲ್ಲಾ ವರ್ಗಗಳ ಕಲ್ಯಾಣವನ್ನು ಗಮನದಲ್ಲಿಟ್ಟುಕೊಂಡು ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ. ವಿಶೇಷವಾಗಿ ರೈತರು, ಮಹಿಳೆಯರು, ಯುವಕರು, ಕಾರ್ಮಿಕರು ಹಾಗೂ ಬಡವರ್ಗದ ಜನರ ಜೀವನಮಟ್ಟವನ್ನು ಸುಧಾರಿಸುವ ಹಲವಾರು ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಒಳಗೊಂಡಿರುವುದು ಈ ಬಜೆಟ್‌ನ ಪ್ರಮುಖ ವಿಶೇಷತೆಯಾಗಿದೆ.

ರಾಜ್ಯದ ಕೃಷಿ ಕ್ಷೇತ್ರಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ರೈತರಿಗೆ ಅನೇಕ ಸೌಲಭ್ಯಗಳನ್ನು ಘೋಷಿಸಲಾಗಿದೆ. ನೀರಾವರಿ, ಬೆಳೆ ವಿಮೆ, ಕೃಷಿ ಉತ್ಪಾದನೆ ಹೆಚ್ಚಿಸುವ ಕಾರ್ಯಕ್ರಮಗಳು ಹಾಗೂ ರೈತರಿಗೆ ಆರ್ಥಿಕ ನೆರವು ನೀಡುವ ಕ್ರಮಗಳು ಕೃಷಿ ಅಭಿವೃದ್ಧಿಗೆ ಸಹಕಾರಿ ಆಗಲಿವೆ. ಇದರಿಂದ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೂ ಮಹತ್ತರ ಕೊಡುಗೆ ದೊರೆಯಲಿದೆ.

ಶಿಕ್ಷಣ ಕ್ಷೇತ್ರಕ್ಕೂ ಈ ಬಜೆಟ್‌ನಲ್ಲಿ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಸರ್ಕಾರಿ ಶಾಲೆಗಳ ಮೂಲಸೌಕರ್ಯ ಸುಧಾರಣೆ, ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸೌಲಭ್ಯಗಳು, ವಿದ್ಯಾರ್ಥಿವೇತನಗಳು ಹಾಗೂ ಉನ್ನತ ಶಿಕ್ಷಣಕ್ಕೆ ಉತ್ತೇಜನ ನೀಡುವ ಯೋಜನೆಗಳು ವಿದ್ಯಾರ್ಥಿಗಳ ಭವಿಷ್ಯವನ್ನು ಬಲಪಡಿಸಲು ಸಹಾಯಕವಾಗಲಿವೆ. ಉತ್ತಮ ಶಿಕ್ಷಣ ವ್ಯವಸ್ಥೆ ರಾಜ್ಯದ ಭವಿಷ್ಯದ ಅಭಿವೃದ್ಧಿಗೆ ಪ್ರಮುಖ ಆಧಾರವಾಗಿದ್ದು, ಈ ದಿಕ್ಕಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳು ಶ್ಲಾಘನೀಯವಾಗಿವೆ.

ಆರೋಗ್ಯ ಕ್ಷೇತ್ರದಲ್ಲಿಯೂ ಹಲವಾರು ಮಹತ್ವದ ಘೋಷಣೆಗಳು ಮಾಡಲಾಗಿದೆ. ಸರ್ಕಾರಿ ಆಸ್ಪತ್ರೆಗಳ ಸುಧಾರಣೆ, ಆರೋಗ್ಯ ಸೇವೆಗಳ ವಿಸ್ತರಣೆ, ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಉತ್ತಮ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ಹಲವು ಯೋಜನೆಗಳನ್ನು ಜಾರಿಗೆ ತರಲು ಸರ್ಕಾರ ಮುಂದಾಗಿದೆ. ಇದರಿಂದ ರಾಜ್ಯದ ಜನತೆಗೆ ಉತ್ತಮ ಆರೋಗ್ಯ ಸೇವೆಗಳು ದೊರೆಯುವ ನಿರೀಕ್ಷೆಯಿದೆ.

ಮಹಿಳೆಯರ ಸಬಲೀಕರಣಕ್ಕೂ ಈ ಬಜೆಟ್‌ನಲ್ಲಿ ವಿಶೇಷ ಆದ್ಯತೆ ನೀಡಲಾಗಿದೆ. ಮಹಿಳೆಯರ ಶಿಕ್ಷಣ, ಉದ್ಯೋಗಾವಕಾಶಗಳು ಹಾಗೂ ಸ್ವಾವಲಂಬನೆ ಹೆಚ್ಚಿಸುವ ವಿವಿಧ ಯೋಜನೆಗಳನ್ನು ಘೋಷಿಸಲಾಗಿದೆ. ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಯನ್ನು ಬಲಪಡಿಸಲು ಸರ್ಕಾರ ಕೈಗೊಂಡಿರುವ ಈ ಕ್ರಮಗಳು ಸಮಾಜದ ಸಮಗ್ರ ಅಭಿವೃದ್ಧಿಗೆ ನೆರವಾಗಲಿವೆ.

ಇದರ ಜೊತೆಗೆ ಮೂಲಸೌಕರ್ಯ ಅಭಿವೃದ್ಧಿಗೆ, ರಸ್ತೆ, ಸಾರಿಗೆ, ನಗರಾಭಿವೃದ್ಧಿ ಹಾಗೂ ಗ್ರಾಮೀಣ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಲಾಗಿದೆ. ಉತ್ತಮ ಮೂಲಸೌಕರ್ಯವು ಕೈಗಾರಿಕೆಗಳ ಬೆಳವಣಿಗೆಗೆ ಹಾಗೂ ಉದ್ಯೋಗಾವಕಾಶಗಳ ಸೃಷ್ಟಿಗೆ ಸಹಾಯಕವಾಗಲಿದೆ. ಇದರಿಂದ ರಾಜ್ಯದ ಆರ್ಥಿಕ ಪ್ರಗತಿ ವೇಗವಾಗಿ ಸಾಗುವ ನಿರೀಕ್ಷೆಯಿದೆ.

ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಈ ಬಜೆಟ್ ಪೂರಕವಾಗಿದ್ದು, ಪ್ರಾದೇಶಿಕ ಅಸಮತೋಲನ ನಿವಾರಣೆಗೂ ದಿಟ್ಟ ಹೆಜ್ಜೆ ಇಡಲಾಗಿದೆ. ಕಲ್ಯಾಣ ಕರ್ನಾಟಕ ಭಾಗದ ಪ್ರದೇಶಾಭಿವೃದ್ಧಿಗಾಗಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು ರೂ 13,000 ಕೋಟಿಯನ್ನು ಬಿಡುಗಡೆ ಮಾಡಲಾಗಿದ್ದು, 2026-27ನೇ ಸಾಲಿಗೆ ಮಂಡಿಸಿದ ಆಯವ್ಯಯದಲ್ಲಿ ರೂ 5 ಕೋಟಿ ಅನುದಾನ ಕಾಯ್ದಿರಿಸಿರುವುದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕರ್ನಾಟಕ ರಾಜ್ಯ ಸರ್ಕಾರದ ಈ ಪ್ರದೇಶದ ಮೇಲೆ ತೋರುವ ಕಾಳಜಿಯನ್ನು ತೋರಿಸುತ್ತದೆ. ಈ ಸಂದರ್ಭದಲ್ಲಿ ನಾನು ಮುಖ್ಯಮಂತ್ರಿಗಳಿಗೆ ಹಾಗೂ ರಾಜ್ಯ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ 17ನೇ ಬಜೆಟ್ ಜನಪರ ಹಾಗೂ ಅಭಿವೃದ್ಧಿಪರ ಬಜೆಟ್ ಆಗಿದ್ದು, ರಾಜ್ಯದ ಸಮಗ್ರ ಪ್ರಗತಿಗೆ ದಾರಿತೋರುವಂತಾಗಿದೆ. ಸಮಾಜದ ಎಲ್ಲಾ ವರ್ಗಗಳ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ರೂಪಿಸಲ್ಪಟ್ಟಿರುವ ಈ ಬಜೆಟ್ ಭವಿಷ್ಯದಲ್ಲಿ ಕರ್ನಾಟಕದ ಅಭಿವೃದ್ಧಿಗೆ ಬಲವಾದ ಅಡಿಗಲ್ಲಾಗಲಿದೆ ಎಂಬುದು ನಂಬಿಕೆಯಾಗಿದೆ ಎಂದು ಪ್ರಕಟಣೆಯಲ್ಲಿ ಶರಣಪ್ಪ ಸಲಾದಪುರ ಹೇಳಿದ್ದಾರೆ.

ಬಜೆಟ್ ನಲ್ಲಿ ಮಾನವ ವನ್ಯಜೀವಿ ಸಂಘರ್ಷ ನಿಯಂತ್ರಣಕ್ಕೆ 1,500 ಕೋಟಿ ರೂ.: ಸಚಿವ ಈಶ್ವರ್ ಖಂಡ್ರೆ ಸ್ವಾಗತ

ಬೀದರ್, ಮಾ.07-

2026-27ನೇ ಸಾಲಿನ ಬಜೆಟ್ ನಲ್ಲಿ ಮಾನವ ವನ್ಯಜೀವಿ ಸಂಘರ್ಷ ನಿಯಂತ್ರಿಸಲು 1,500 ಕೋಟಿ ರೂ. ಘೋಷಿಸಿದ್ದು, ಈ ವರ್ಷ 269 ಕೋಟಿ ಮೀಸಲಿಟ್ಟಿರುವುದನ್ನು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ್ ಖಂಡ್ರೆ ಅವರು ಸ್ವಾಗತಿಸಿದ್ದಾರೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿರುವ ದಾಖಲೆಯ 17ನೇ ಬಜೆಟ್ ಸರ್ವಸ್ಪರ್ಶಿಯಾಗಿದ್ದು, ಬಡವರ, ಮಧ್ಯಮವರ್ಗದವರ ಏಳಿಗೆಗೆ ಸಮರ್ಪಿತವಾಗಿದೆ. ಮಿಗಿಲ್ಗಿ ವನ್ಯಜೀವಿ ಮಾನವ ಸಂಘರ್ಷ ನಿಗ್ರಹಕ್ಕೆ ಒತ್ತು ನೀಡಿದೆ. ಇದರ ಜೊತೆಗೆ ಈಗಾಗಲೇ ಗ್ರೇಟರ್ ಹೆಸರುಘಟ್ಟ ಸಂರಕ್ಷಿತ ಹುಲ್ಲುಗಾವಲು ಎಂದು ಘೋಷಿಸಿರುವ ಪ್ರದೇಶದ ಅಭಿವೃದ್ಧಿಗೆ ಕ್ರಮ ಕೈಗೊಂಡಿರುವುದು, ಬೆಂಗಳೂರು ಮಹಾನಗರದಲ್ಲಿ ಶ್ವಾಸತಾಣ ಸಂರಕ್ಷಣೆಯ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ ಎಂದು ಅವರು ತಿಳಿಸಿದ್ದಾರೆ.

ರಾಜ್ಯದಲ್ಲಿ ಚಿರತೆಗಳ ಹಾವಳಿ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಬೆಂಗಳೂರು ಹೊರವಲಯದ ಬನ್ನೇರುಘಟ್ಟದಲ್ಲಿ 5 ಕೋಟಿ ರೂ. ವೆಚ್ಚದಲ್ಲಿ ಚಿರತೆ ಪುನರ್ವಸತಿ ಕೇಂದ್ರ ಸ್ಥಾಪಿಸುತ್ತಿರುವುದೂ ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ. 2026-27ರ ಸಾಲಿನಲ್ಲಿ ಅರಣ್ಯ ಇಲಾಖೆಯ ವಿವಿಧ ವೃಂದದಲ್ಲಿ ಖಾಲಿ ಇರುವ ಸುಮಾರು 2 ಸಾವಿರ ಹುದ್ದೆಗಳ ಭರ್ತಿ ಮಾಡಲಾಗುತ್ತಿದ್ದು, ಇದು ಕೂಡ ಇಲಾಖೆಯ ಸಮಗ್ರ ಕಾರ್ಯವೈಖರಿಯ ಸುಧಾರಣೆಗೆ ಚೈತನ್ಯ ತುಂಬಲಿದೆ ಎಂದು ಹೇಳಿದ್ದಾರೆ.

ವಿಶ್ವವಿಖ್ಯಾತ ಮೈಸೂರು ಚಾಮರಾಜೇಂದ್ರ ಮೃಗಾಲಯ ಮತ್ತು ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ಪ್ರಕೃತಿ ನಿರೂಪಣಾ ಕೇಂದ್ರ ಸ್ಥಾಪನೆಯ ಕ್ರಮವೂ ಸ್ವಾಗತಾರ್ಹವಾಗಿದೆ ಎಂದ ಅವರು, ಜಾಗತಿಕ ತಾಪಮಾನ ಏರಿಕೆ ಹಾಗೂ ಹವಾಮಾನ ಬದಲಾವಣೆಯ ಪ್ರತೀಕೂಲ ಪರಿಣಾಮ ಎದುರಿಸುತ್ತಿರುವ ಪ್ರಸಕ್ತ ಸನ್ನಿವೇಶದಲ್ಲಿ ಶೇ.10ಕ್ಕಿಂತ ಕಡಿಮೆ ಅರಣ್ಯ ಇರುವ ಜಿಲ್ಲೆಗಳಲ್ಲಿ ಸುಮಾರು 75,000 ಹೆಕ್ಟೇರ್ ನಲ್ಲಿ ಅರಣ್ಯೀಕರಣ ಚಟುವಟಿಕೆಗಳಿಗೆ ಕೆ ಕೆ ಆರ್ ಡಿ ಬಿಯ 50 ಕೋಟಿ ರೂ. ಸೇರಿದಂತೆ 150 ಕೋಟಿ ರೂ. ಹಂಚಿಕೆ ಮಾಡಿರುವುದನ್ನು ಈಶ್ವರ್ ಖಂಡ್ರೆ ಅವರು ಸ್ವಾಗತಿಸಿದ್ದಾರೆ.

ರಾಜ್ಯದ ಜನರಿಗೆ ಶುದ್ಧ ಗಾಳಿಯ ಖಾತ್ರಿಗಾಗಿ ಕರ್ನಾಟಕದಾದ್ಯಂತ 15 ಹೊಸ ಪರಿವೇಕ್ಷಿಕ ನಿರಂತರ ವಾಯು ಗುಣಮಟ್ಟದ ಮಾಪನ ಕೇಂದ್ರಗಳನ್ನು ಸ್ಥಾಪಿಸುತ್ತಿರುವುದು ಅತ್ಯಂತ ಅಗತ್ಯ ಹಾಗೂ ಮಹತ್ವದ ಹೆಜ್ಜೆಯಾಗಿದೆ. ಮಾಗಡಿಯ ಹುಲಿಕಲ್-ಕುದೂರು ಗ್ರಾಮದಲ್ಲಿ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರ ಸ್ಮಾರಕ ನಿರ್ಮಿಸುತ್ತಿರುವುದು ಪರಿಸರ ಪ್ರೇಮಿಗಳಿಗೆ ಸ್ಪೂರ್ತಿಯ ತಾಣವಾಗಲಿದೆ ಎಂದು ಅವರು ಹರ್ಷ ವ್ಯಕ್ತಪಡಿಸಿದ್ದಾರೆ.



ಜಂಬನಗೌಡ ಅವರಿಗೆ ಪಿಎಚ್‌ಡಿ ಪದವಿ ಪ್ರದಾನ

ಬಳ್ಳಾರಿ,ಮಾ.06-

ಬಳ್ಳಾರಿಯ ನಿವಾಸಿ ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಸಂಶೋಧನಾ ವಿದ್ಯಾರ್ಥಿಯಾಗಿದ್ದ ಜಂಬನಗೌಡ ಅವರಿಗೆ ಪಿಎಚ್‌ಡಿ ಪದವಿ ಲಭಿಸಿದೆ.

ವಿವಿಯ ಡಾ.ಎಂ.ಮಲ್ಲಿಕಾರ್ಜುನ ಗೌಡ ಅವರ ಮಾರ್ಗದರ್ಶನದಲ್ಲಿ ವಿಜಯನಗರ ಸಾಮ್ರಾಜ್ಯ ಕುರಿತ ಕನ್ನಡ ನಾಟಕಗಳ ಅಧ್ಯಯನ ಎನ್ನುವ ವಿಷಯದ ಮೇಲೆ ಸಮಗ್ರ ಅಧ್ಯಯನ ಮಾಡಿ ಸಲ್ಲಿಸಿದ ಮಹಾ ಪ್ರಬಂಧಕ್ಕೆ

ಇತ್ತೀಚೆಗೆ ನಡೆದ ಕನ್ನಡ ವಿಶ್ವವಿದ್ಯಾಲಯದ 34 ನೇ ಘಟಿಕೋತ್ಸವದ ನುಡಿ ಹಬ್ಬದಲ್ಲಿ ಜಂಬನಗೌಡ ಅವರಿಗೆ ಪಿಎಚ್‌ಡಿ ಪದವಿ ಪ್ರದಾನ ಮಾಡಲಾಗಿದೆ. ಈ ಸಂದರ್ಭ ದಲ್ಲಿ ಮಾರ್ಗದರ್ಶಕರು, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಮುಖ್ಯಸ್ಥರು, ಪ್ರಾಧ್ಯಾಪಕರು, ಪೋಷಕರು, ಮಿತ್ರರು ಅಭಿನಂದನೆ ಸಲ್ಲಿಸಿದ್ದಾರೆ.

ಸ್ಪರ್ಧಾತ್ಮಕ ಜಗತ್ತಿನಲ್ಲಿ ಕೌಶಲ್ಯ ಕಲಿಕೆ ಅಗತ್ಯ: ಪ್ರೊ.ಅಕ್ಕಿ ಮಾರುತಿ



ಗಂಗಾವತಿ,ಮಾ.07-

ಯಾವುದೇ ಕ್ಷೇತ್ರದಲ್ಲೂ ಇಂದು ಕೌಶಲ್ಯಗಳಿಗೆ ಪ್ರಾಧಾನ್ಯತೆ ಇದೆ. ಹಾಗಾಗಿ ಕಾಲೇಜು ಶಿಕ್ಷಣದಲ್ಲೂ ಕೌಶಲ್ಯಾಧಾರಿಕ ಕಲಿಕೆಗೆ ಆದ್ಯತೆ ನೀಡಲಾಗುತ್ತಿದೆ ಎಂದು ನಗರದ ಶ್ರೀ ಕೊಲ್ಲಿ ನಾಗೇಶ್ವರರಾವ್ ಗಂಗಯ್ಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಅಕ್ಕಿ ಮಾರುತಿ ಹೇಳಿದರು.

ಕಾಲೇಜಿನ ಸಭಾಂಗಣದಲ್ಲಿ ಮಾರ್ಚ್ 6ರಂದು ಆಂತರಿಕ ಗುಣಮಟ್ಟ ಭರವಸೆ ಕೋಶದ ಸಹಯೋಗದಡಿ ನಡೆದ ಆನ್‌ಲೈನ್ ವಿಶೇಷ ಉಪನ್ಯಾಸ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ವಾಣಿಜ್ಯಶಾಸ್ತ್ರ, ಅರ್ಥಶಾಸ್ತ್ರ ಮತ್ತು ನಿರ್ವಹಣಾಶಾಸ್ತ್ರದಲ್ಲಿ ಕೌಶಲ್ಯ ತರಬೇತಿ ಇಂದು ಅಗತ್ಯವಾಗಿದೆ. ವಿದ್ಯಾರ್ಥಿಗಳು ಕೌಶಲ್ಯಗಳ ಕಲಿಕೆಯಲ್ಲಿ ಶ್ರದ್ಧೆ ವಹಿಸಿದರೆ ಭವಿಷ್ಯದ ದಿನಗಳು ಮತ್ತಷ್ಟು ಉತ್ತಮವಾಗಲಿವೆ ಎಂದರು.

ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದ ಧಾರವಾಡದ ಮಹಿಳಾ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀಮತಿ ಪೂರ್ಣಿಮಾ ಡಿ.ಕಾಂಬ್ಳೆ ಅವರು ವಿವಿಧ ಕ್ಷೇತ್ರಗಳಲ್ಲಿರುವ ಕೌಶಲ್ಯಗಳ ಮಹತ್ವವನ್ನು ಮನವರಿಕೆ ಮಾಡಿಕೊಟ್ಟರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಡಾ.ಶಿವರಾಜ ಗುರಿಕಾರ ಮಾತನಾಡಿ, ಕಾಲೇಜಿನ ವಿದ್ಯಾರ್ಥಿಗಳಿಗೆ ಇಂಥ ವಿಶೇಷ ಉಪನ್ಯಾಸಗಳ ಮೂಲಕ ಕಲಿಕಾಸಕ್ತಿ ಮೂಡಿಸುವ ಕೆಲಸ ಮಾಡಲಾಗುತ್ತಿದೆ. ಇಂದಿನ ದಿನಗಳಲ್ಲಿ ಉದ್ಯಮ ಮತ್ತು ಉದ್ಯೋಗಗಳಲ್ಲೂ ಕೌಶಲ್ಯಗಳಿಗೆ ವಿಶೇಷ ಸ್ಥಾನ-ಮಾನಗಳಿವೆ ಎಂದು ತಿಳಿಸಿದರು.

ವಾಣಿಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಮೆಹತಾಜ್ ಅಂಜುಮ್ ಕಾರ್ಯಕ್ರಮ ನಿರ್ವಹಿಸಿದರು. ಆಂತರಿಕ ಗುಣಮಟ್ಟ ಭರವಸೆ ಕೋಶದ ಸಂಚಾಲಕ ಮಂಜುನಾಥ, ಸಹ ಸಂಚಾಲಕ ಅನಿಲ್‌ಕುಮಾರ್ ಉಪಸ್ಥಿತರಿದ್ದರು. ವಿವಿಧ ವಿಭಾಗಗಳ ವಿದ್ಯಾರ್ಥಿಗಳು ವಿಶೇಷ ಉಪನ್ಯಾಸ ಕಾರ್ಯಕ್ರಮದ ಪ್ರಯೋಜನ ಪಡೆದರು.

ಒಂದನೇಯ ಪುಟದಿಂದ

ನವೋದಯ ಕಾಲೇಜು: ಸಾವಿತ್ರಿಬಾಯಿ ಪುಲೆ ಪುತ್ತಳಿ ಸ್ಥಾಪನೆಗೆ ಮನವಿ

ಮಂಜೂರು ಮಾಡಿದ್ದಾರೆ.ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತಿಯ ಜೆ.ಇ ಮಹೇಶ ರವರು ಅಳತೆ ಮಾಡುವ ಸಂದರ್ಭದಲ್ಲಿ ಆ ಜಾಗದ ಮಾಲೀಕರು ತಕರಾರು ಮಾಡಿದ್ದು ಇರುತ್ತದೆ. ಆದ್ದರಿಂದ ಈ ದೇಶದ ಪ್ರಥಮ ಮಹಿಳಾ ಶಿಕ್ಷಕಿಯಾದ ಸಾವಿತ್ರಿಬಾಯಿ ಪುಲೆ ರವರಿಗೆ ಅವಮಾನ ಮಾಡಿದಕ್ಕೆ ಅವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬೇಕು ಮತ್ತು ನಗರದ ಎಲ್ಲಾ ಸಮುದಾಯದ ಜನರು ಮತ್ತು ಸಾವಿತ್ರಿಬಾಯಿ ಪುಲೆ ಅಭಿಮಾನಿಗಳು ಜಯಂತೊತ್ಸ ವ ಮಾಡುವುದಕ್ಕೆ ಮತ್ತು ಜೀವನದಲ್ಲಿ ಅವರ ಆದರ್ಶನ ಉಳಿವಿಗಾಗಿ ತಾವು ಪುತ್ತಳಿ ಸ್ಥಾಪನೆಗೆ ಅವಕಾಶ ಮಾಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ರವೀಂದ್ರ ಜಾಲ್ದಾರ ರಾಘವೇಂದ್ರ ಬೋರೆಡ್ಡಿ,ಮಹಿಳೆಯರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

''ನಶಾ ಮುಕ್ತ ಭಾರತ ಯುವ ಶುದ್ಧಿ ಅಭಿಯಾನ ವಾಕಥಾನ್'' ಭವ್ಯ ಯಶಸ್ಸು

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಸಂಯೋಜಿತ ರಾಯಚೂರು ಜಿಲ್ಲಾ ವ್ಯಾಪ್ತಿಯ ಕಾಲೇಜುಗಳ ಸಂಘ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ದಿಶಾ ಭೋದ್ ಫೌಂಡೇಶನ್ ಹಾಗೂ ಭಾರತ ಸರ್ಕಾರದ ಗೃಹ ಸಚಿವಾಲ ಯದ ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ ಇವರ ಸಹಯೋಗದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿ ಸಲಾಗಿತ್ತು.

ಮಂತ್ರಾಲಯದ ಶ್ರೀ ರಾಘ ವೇಂದ್ರಸ್ವಾಮಿ ಮಠದ ಪೀಠಾಧಿಪತಿಗಳಾದ ಪರಮಪೂಜ್ಯ 108 ಶ್ರೀ ಶ್ರೀ ಸುಬುಧೇಂದ್ರ ತೀರ್ಥ ರು ಸಸಿಗೆ ನೀರು ಹಾಕುವ ಮೂಲಕ ವಾಕಥಾನ್‌ಗೆ ಚಾಲನೆ ನೀಡಿದರು.

ಆಶೀರ್ವಚನ ನೀಡಿದ ಶ್ರೀಗಳು, ಇಂದಿನ ಯುವ ಪೀಳಿಗೆ ದೇಶದ ಭವಿಷ್ಯವಾಗಿದ್ದು ಸಮಾಜ ವನ್ನು ಸುದೃಢವಾಗಿ ಕಟ್ಟುವ ಜವಾ ಬ್ದಾರಿ ಯುವಕರ ಮೇಲಿದೆ ಎಂದು ಹೇಳಿದರು. ಮಾದಕ ವಸ್ತುಗಳಂತಹ ಕೆಟ್ಟ ಅಭ್ಯಾಸಗಳಿಂದ ದೂರವಿದ್ದು ಆರೋಗ್ಯಕರ ಹಾಗೂ ಸಂಸ್ಕಾರವಂತ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಕರೆ ನೀಡಿದರು. ಜೊತೆಗೆ ಅಂಗಾಂಗ ದಾನ ಮತ್ತು ರಕ್ತದಾನದಂತಹ ಮಹತ್ವದ ಸೇವೆಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ ಇತರರ ಜೀವ ಉಳಿಸುವ ಮಹಾದಾನದಲ್ಲಿ ಪ್ರತಿ ಯೊಬ್ಬರೂ ಮುಂದಾಗಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಆರಂಭದಲ್ಲಿ ಪ್ರಸ್ತಾವಿಕವಾಗಿ ಮಾತನಾಡಿದ ಡಾ. ಭಗವಾನ್ ಬಿ.ಸಿ., ಯುವಕರನ್ನು ಮಾದಕ ವಸ್ತುಗಳಿಂದ ದೂರವಿರಿಸಿ ಆರೋಗ್ಯಕರ ಜೀವನಶೈಲಿಯನ್ನು ರೂಢಿಸಿಕೊಳ್ಳುವಂತೆ ಜಾಗೃತಿ ಮೂಡಿಸುವುದು ಈ ಅಭಿಯಾನದ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು. ಈ ವೇಳೆ ವಿದ್ಯಾರ್ಥಿ ಗಳಿಂದ ನಶಾಮುಕ್ತ ಸಮಾಜ ನಿರ್ಮಾಣದ ಪ್ರತಿಜ್ಞಾವಿಧಿಯನ್ನೂ ಸ್ವೀಕರಿಸಲಾಯಿತು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ. ಭಾರ್ಗವ್ ಮಾತ ನಾಡಿ, ವಿಶ್ವವಿದ್ಯಾಲಯವು ಮೂರು ದಶಕಗಳಿಂದ ಕಾರ್ಯನಿರ್ವಹಿ ಸುತ್ತಿದ್ದು 500ಕ್ಕೂ ಹೆಚ್ಚು ಕಾಲೇಜುಗಳನ್ನು ಹೊಂದಿದೆ ಎಂದು ಹೇಳಿದರು. ಪ್ರತಿವರ್ಷ ಸುಮಾರು 63 ಸಾವಿರ ವಿದ್ಯಾರ್ಥಿಗಳಿಗೆ ಪದವಿ ನೀಡಲಾಗುತ್ತಿದ್ದು, ನೂರಕ್ಕೂ ಹೆಚ್ಚು ಚಿನ್ನದ ಪದಕಗಳನ್ನು ನೀಡಿ ದೇಶದ ಪ್ರಮುಖ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವಾಗಿ ಬೆಳೆದಿದೆ ಎಂದು ವಿವರಿಸಿದರು.

ದೇಶದಲ್ಲಿ ಅಂಗಾಂಗ ದಾನದ ಕೊರತೆ ಇರುವುದನ್ನು ಉಲ್ಲೇಖಿಸಿದ ಅವರು, ಪ್ರತಿ ವರ್ಷ ಸುಮಾರು 2ರಿಂದ 3 ಲಕ್ಷ ಅಂಗಾಂಗ ದಾನದ ಅವಶ್ಯಕತೆ ಇದೆ. ಆದರೆ ದಾನ ಮಾಡಲು ಮುಂದಾಗುವವರ ಸಂಖ್ಯೆ ಕಡಿಮೆ ಇದೆ. ಕರ್ನಾಟಕದಲ್ಲಿ ಸುಮಾರು 58 ಸಾವಿರ ಮಂದಿ ಅಂಗಾಂಗ ದಾನಕ್ಕೆ ನೋಂದಣಿ ಮಾಡಿಸಿಕೊಂಡಿದ್ದು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲಿ 10 ಸಾವಿರಕ್ಕೂ ಹೆಚ್ಚು ಮಂದಿ ಅಂಗಾಂಗ ದಾನಕ್ಕೆ ಪ್ರತಿಜ್ಞೆ ಕೈಗೊಂಡಿರುವುದು ಸಮಾಜಕ್ಕೆ ಮಾದರಿಯಾಗಿದೆ ಎಂದರು. ಒಬ್ಬ ವ್ಯಕ್ತಿಯ ಅಂಗಾಂಗ ದಾನದಿಂದ ಎಂಟು ಜನರ ಜೀವ ಉಳಿಸಬಹುದು ಎಂದು ಅವರು ಹೇಳಿದರು.

ಜಿಲ್ಲಾಧಿಕಾರಿ ನಿತೀಶ್ ಕೆ., ಐಎಎಸ್ ಮಾತನಾಡಿ, ಮಾದಕ ವಸ್ತುಗಳ ಬಳಕೆ ಯುವಕರ ಭವಿಷ್ಯಕ್ಕೆ ದೊಡ್ಡ ಅಪಾಯವಾಗಿದ್ದು ಸಮಾಜದ ಪ್ರತಿಯೊಬ್ಬರೂ ಇದರ ವಿರುದ್ಧ ಜಾಗೃತರಾಗಬೇಕು ಎಂದು ಕರೆ ನೀಡಿದರು. ರಾಯಚೂರು ಜಿಲ್ಲೆ ಗಡಿಭಾಗದಲ್ಲಿರುವುದರಿಂದ ಬೇರೆ ರಾಜ್ಯಗಳ ಸಂಪರ್ಕದ ಹಿನ್ನೆಲೆಯಲ್ಲಿ ಮಾದಕ ವಸ್ತುಗಳ ಅಕ್ರಮ ಸಾಗಾಟ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಹೇಳಿದರು. ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ತಮ್ಮ ಸುತ್ತಮುತ್ತ ನಡೆಯುವ ಅಕ್ರಮ ಚಟುವಟಿಕೆಗಳ ಬಗ್ಗೆ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಗೆ ತಕ್ಷಣ ಮಾಹಿತಿ ನೀಡಬೇಕು ಎಂದು ಮನವಿ ಮಾಡಿದರು.

ಜಿಲ್ಲೆಯಲ್ಲಿ ಮಾದಕ ವ್ಯಸನಕ್ಕೆ ಒಳಗಾದವರ ಪುನರ್ವಸತಿಗಾಗಿ ಶೀಘ್ರದಲ್ಲೇ ಡಿಅಡಿಕ್ಷನ್ ಕೇಂದ್ರ ಸ್ಥಾಪಿಸುವ ಯೋಜನೆ ರೂಪಿಸಲಾಗುತ್ತಿದೆ. ರಾಯಚೂರು ರಿಮ್ಸ್ ಆಸ್ಪತ್ರೆಯಲ್ಲಿ ವಿಶೇಷ ವಿಭಾಗದ ಮೂಲಕ ಈ ಕೇಂದ್ರ ಆರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಅಗತ್ಯ ನಿಧಿಯನ್ನು ಕೆಕೆಆರ್‌ಡಿಬಿ ಮೂಲಕ ಒದಗಿಸಲಾಗುತ್ತದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಮಾದಕ ವಸ್ತುಗಳ ಬಳಕೆ ಹೆಚ್ಚುತ್ತಿರುವುದು ಆತಂಕಕಾರಿ ವಿಷಯವಾಗಿದೆ ಎಂದು ಹೇಳಿದರು. ನಗರದಲ್ಲಿ ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಸೇರಿದಂತೆ ವಿವಿಧ ಕೋರ್ಸ್‌ಗಳಿಗಾಗಿ ಅನೇಕ ವಿದ್ಯಾರ್ಥಿಗಳು ಹೊರರಾಜ್ಯಗಳಿಂದ ಬರುತ್ತಿದ್ದಾರೆ. ಕೆಲವರು ಗಾಂಜಾ ಸೇರಿದಂತೆ ಮಾದಕ ವಸ್ತುಗಳ ಬಳಕೆಗೆ ಒಳಗಾಗುತ್ತಿರುವುದು ಗಮನಕ್ಕೆ ಬಂದಿದೆ. ಇದನ್ನು ತಡೆಯಲು ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿದೆ ಎಂದು ಅವರು ಎಚ್ಚರಿಸಿದರು. ಮಾದಕ ವಸ್ತುಗಳನ್ನು ಮಾರಾಟ ಮಾಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದರು.

ವಾಕಥಾನ್ ನಗರದ ಎಸ್.ಪಿ. ಪರೇಡ್ ಮೈದಾನದಿಂದ ಆರಂಭವಾಗಿ ಗನ್ ಸರ್ಕಲ್, ಮಹಾಲೇಶ್ವರ ವೃತ್ತ, ಬಸವೇಶ್ವರ ಸರ್ಕಲ್ ಮಾರ್ಗವಾಗಿ ಗೋಣಿ ಗಾಂಧಿ ಕ್ರೀಡಾಂಗಣದಲ್ಲಿ ಮುಕ್ತಾಯಗೊಂಡಿತು. ಡೊಳ್ಳುಗಳು, ಸೈಕಲ್ ಜಾಥಾ ಹಾಗೂ ಜಾಗೃತಿ ಫಲಕಗಳೊಂದಿಗೆ ಮೆರವಣಿಗೆ ನಡೆಯಿತು.

ಕಾರ್ಯಕ್ರಮದಲ್ಲಿ ನವೋದಯ ಸಂಸ್ಥೆಯ ವ್ಯವಸ್ಥಾಪಕ ಎಸ್.ಆರ್. ರೆಡ್ಡಿ, ರಿಮ್ಸ್ ನಿರ್ದೇಶಕ ಡಾ. ಬಿ.ಎಚ್. ರಮೇಶ್, ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋದ ನಿರೀಕ್ಷಕ ವಿಶಾನೋ ಸಿಂಗ್, ದಿಶಾಭೋದ್ ಫೌಂಡೇಶನ್‌ನ ಡಾ. ಹರ್ಷ ಹರ್ದಾರ್, ಎಸ್.ಪಿ. ಚಿದಾನಂದ್, ವಿವಿಧ ಕಾಲೇಜುಗಳ ಪ್ರಾಂಶುಪಾಲರು, ಶಿಕ್ಷಕರು ಹಾಗೂ ಸಾವಿರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ವಿದ್ಯಾರ್ಥಿಗಳು ''ನಶಾ ಮುಕ್ತ ಭಾರತ, ನಶಾ ಮುಕ್ತ ಕರ್ನಾಟಕ, ನಶಾ ಮುಕ್ತ ಕ್ಯಾಂಪಸ್'' ಎಂಬ ಘೋಷಣೆಗಳೊಂದಿಗೆ ಜಾಗೃತಿ ಮೂಡಿಸಿದರು.

ಬಜೆಟ್: ಬಸನಗೌಡ ಬಾದರ್ಲಿ ಮನವಿಗೆ ಮನ್ನಣೆ ನೀಡಿದ ಸಿಎಂ

ಪೂರ್ಣಗೊಂಡಿದ್ದು. ಇನ್ನು ಉಳಿದ 17 -18. ಕಿಲೋ ಮೀಟರ್ ಕಾಮಗಾರಿಯನ್ನು ಶೀಘ್ರದಲ್ಲಿ ಮುಕ್ತಾಯಗೊಳಿಸಲು ಅನುದಾನ ಮೀಸಲಿ ಇರಿಸಲಾಗಿದೆ. ರಾಜ್ಯದ್ಯಂತ ಇರುವ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಿಗೆ ವಿದ್ಯಾರ್ಥಿಗಳಲ್ಲಿ ನಾಯಕತ್ವ ಹಾಗೂ ಪ್ರಜಾಪ್ರಭುತ್ವ ಮೌಲ್ಯಗಳನ್ನು ವೃದ್ಧಿಸಲು. ಕಾಲೇಜು ವಿದ್ಯಾರ್ಥಿ ಸಂಘಗಳ ಚುನಾವಣೆ ನಡೆಸುವ ಸಂಬಂಧ ಅಗತ್ಯ ನೆರವು ನೀಡುವುದು. ಸಿಂಧನೂರು. ತಾಲೂಕಿನ ಅಭಿವೃದ್ಧಿಗೆ 2026. 27 ನೇಯ ಸಾಲಿನ.ಬಜೆಟ್ ನಲ್ಲಿ ಅಗತ್ಯ ಅನುದಾನವನ್ನು ನೀಡಿದ. ಮಾನ್ಯ. ಮುಖ್ಯಮಂತ್ರಿ ಸಿದ್ದರಾಮಯ್ಯ. ಹಾಗೂ ಉಪಮುಖ್ಯಮಂತ್ರಿ. ಶ್ರೀ. ಡಿ.ಕೆ ಶಿವಕುಮಾರ್. ಇವರಿಗೆ ಸಿಂಧನೂರು ಜನತೆಯ ಪರವಾಗಿ.ವಿಧಾನ ಪರಿಷತ್ ಶಾಸಕರಾದ.ಬಸನಗೌಡ ಬಾದರ್ಲಿ.ಅವರು ಅಭಿನಂದನೆಗಳನ್ನು ತಿಳಿಸಿದರು .

ಆರ್ಥಿಕ ಶಿಸ್ತಿನ ಮತ್ತು ಅಭಿವೃದ್ಧಿ ಪರ ಬಜಟ್

ಸಿಎಂ ಸಿದ್ದರಾಮಯ್ಯನವರು ದಾಖಲೆಯ 17ನೇ ಬಜೆಟ್ ಮಂಡಿಸಿದ್ದಾರೆ.ಇದು ರಾಜ್ಯದ ಸರ್ವತೋಮುಖಿ ಅಭಿವೃದ್ಧಿಯ ದೃಷ್ಟಿಯಿಂದ ನಾಡಿನ ಜನಪರವಾದ ಈ ಬಜೆಟ್ ನಲ್ಲಿ ಗುಣಮಟ್ಟದ ಶಿಕ್ಷಣ,ಶಿಕ್ಷಕರ ನೇಮಕಾತಿ, ಕೃಷಿ ಮತ್ತು ನೀರಾವರಿಯ ಬಲವರ್ಧನೆಯ ಜೊತೆಗೆ ಸರ್ವರಿಗೂ ಸಮಪಾಲು ಎಂಬಂತೆ ಎಲ್ಲಾ ಕ್ಷೇತ್ರಕ್ಕೂ ಆದ್ಯತೆ ನೀಡಿದ್ದು, ಇದೊಂದು ಉತ್ತಮ ಬಜೆಟ್ ಆಗಿದೆ. ಅಲ್ಲದೇ ಇದೊಂದು ಜನಪರ ಕಾಳಜಿಯ ಬಜೆಟ್ ಆಗಿದೆ.

ಡಿ ಎಸ್ ಹೂಲಗೇರಿ, ಮಾಜಿ ಶಾಸಕರು ಹಾಗೂ ಕೆಪಿಸಿಸಿ ರಾಜ್ಯ ಉಪಾಧ್ಯಕ್ಷರು.

ಒಳ ಮೀಸಲಾತಿ ಐಕ್ಯ ಹೋರಾಟ ಸಮಿತಿಯಿಂದ ಬೃಹತ್ ಪ್ರತಿಭಟನೆ

ಹುದ್ದೆಗಳನ್ನು ಭರ್ತಿಮಾಡುವ ಕುರಿತು 16ನೇ ಸಚಿವ ಸಂಪುಟದಲ್ಲಿ ತಿರ್ಮಾನ ಮಾಡಿರುವುದರಿಂದ ಮಾದಿಗ ಸಮುದಾಯಕ್ಕೆ ತೀವ್ರವಾದ ಅನ್ಯಾಯವಾಗಲಿದೆ.

ಅದ್ದರಿಂದ ರಾಜ್ಯ ಸರ್ಕಾರ ನೇಮಕಾತಿಗಾಗಿ ಹೋರಾಡಿಸಿರುವ ಅದೇಶವನ್ನು ಕೂಡಲೇ ಹಿಂಪಡೆಯಬೇಕು ಹಾಗೂ ನೇಮಕಾತಿಯಲ್ಲಿ ಒಳಮೀಸಲಾತಿಯನ್ನು ಕಡ್ಡಾಯಗೊಳಿಸಬೇಕು. ಕೂಡಲೆ ಒಳಮೀಸಲಾತಿ ಕುರಿತು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಮನವರಿಕೆ ಮಾಡಿ ಸಂವಿಧಾನದ 9ನೇ ಅನುಸೂಚಿಯಲ್ಲಿ ಸೇರಿಸುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು.

ನೇರ ನೇಮಕಾತಿ,ಬಡ್ತಿ ನೇಮಕಾತಿ ಮತ್ತು ಮುಂಬಡ್ತಿ ಬ್ಯಾಕ್ ಲ್ಯಾಗ್ ನೇಮಕಾತಿಗಳಲ್ಲಿ ಒಳಮೀಸಲಾತಿಯನ್ನು ಜಾರಿ ಮಾಡಬೇಕು , ಎಸ್.ಇ.ಪಿ-ಟಿ.ಎಸ್ ಪಿ. ಅನುದಾನ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಒಳಮೀಸಲಾತಿಯನ್ನು ಜಾರಿಗೆ ತರಬೇಕು. ವಿಶ್ವವಿದ್ಯಾಲಯಗಳಲ್ಲಿ ನಡೆಯುವ ನೇಮಕಾತಿಗಳಲ್ಲಿ ಘಟಕ ಎಂದು ಪರಿಗಣಿಸಬೇಕೆನ್ನುವ ಪ್ರಸ್ತಾವನೆಯನ್ನು ಕೈಬಿಡಬೇಕು ಸಮಾಜ ಕಲ್ಯಾಣ ಇಲಾಖೆಯನ್ನು ಸಮರ್ಪಕವಾಗಿ ನಿರ್ವಹಿಸದೆ ಇರುವ ಸಚಿವರನ್ನು ಬದಲಾಯಿಸಬೇಕು.ಆದಿಜಾಂಬವ ಅಭಿವೃದ್ಧಿ ನಿಗಮಕ್ಕೆ ಅಂದಾಜು ಒಂದು ಸಾವಿರ ಕೋಟಿ ಅನುದಾನವನ್ನು ಮೀಸಲಿಡಬೇಕು.ಎಂದು ಒತ್ತಾಯಿಸಿದರು.

ಬಸವ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಟೈರ್‌ಗೆ ಬೆಂಕಿ ಹಚ್ಚಿ ಪ್ರತಿಭಟನೆಯನ್ನು ನಡೆಸಲಾಯಿತು.

ಈ ಸಂಧರ್ಭದಲ್ಲಿ ಶಿವರಾಜನಾಯಕ, ಪ್ರಭುರಾಜ್ ಕೋಡ್ಲಿ, ಹುಸೇನಪ್ಪ ಜಗ್ಲಿ, ಚಂದ್ರಶೇಖರ ಕುರ್ಡಿ, ಪಿ.ಜಯಪ್ರಕಾಶ,ಮೂಕಪ್ಪ ಕಟ್ಟಿಮನಿ,ಆಶೋಕ ತಡಕಲ್, ಅಬ್ರಾಹಂ ಹೊನ್ನಟಗಿ , ಮಲ್ಲೇಶ ಜಗ್ಲಿ, ಪಿ.ಆನಿಲ್ ಕುಮಾರ, ಸುಂದರ ಕಪಗಲ್, ಶಾಂತಪ್ಪ ಕಪಗಲ್, ಪಿ.ಪರಮೇಶ, ತಾಯಪ್ಪ ಬಿ ಹೊಸೂರ್, ಜೆ.ಹೆಚ್. ದೇವರಾಜ್ ,ಯಲ್ಲಪ್ಪೊ ಹಿರೇಬಾದರದಿನ್ನಿ, ಬಸವರಾಜ ನಕ್ಕುಂದಿ, ಪಿ.ರವಿಕುಮಾರ, ರಮೇಶ, ಹನುಮಂತಕೋಟೆ, ನವೀನ್ ಕುರ್ಡಿ, ರವಿ ನೀರಮಾನ್ವಿ, ಪರಸೂರಾಮ ಬಾಗಲವಾಡ, ಶರಣು ಮುದ್ದಂಗುಡಿ, ಪ್ರಶಾಂತ ಜಾಗೀರಪನ್ನೂರು, ಸೇರಿದಂತೆ ತಾಲೂಕಿನ ಸುತ್ತಮುತ್ತಲಿನ ಗ್ರಾಮಗಳ ಸಾವಿರಾರು ಸಮುದಾಯದ ಜನರು ಭಾಗವಹಿಸಿದ್ದರು.



ಲಿಂಗಸಗೂರು: ಕನ್ನಡ ಸೇನೆ ಕರ್ನಾಟಕ ಸಂಘಟನೆಯ ನೂತನ ಪದಾಧಿಕಾರಿಗಳ ಆಯ್ಕೆ

ಲಿಂಗಸಗೂರು,ಮಾ.07-

ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಯ ಸಂರಕ್ಷಣೆಗಾಗಿ ಹೋರಾಡುತ್ತಿರುವ ಕನ್ನಡ ಸೇನೆ ಕರ್ನಾಟಕ ಸಂಘಟನೆಯ ಲಿಂಗಸಗೂರು ತಾಲೂಕು ಮತ್ತು ನಗರ ಘಟಕಕ್ಕೆ ನೂತನ ಪದಾಧಿಕಾರಿಗಳನ್ನು ನೇಮಕ ಮಾಡಲಾಗಿದೆ.

ಸಂಘಟನೆಯ ಜಿಲ್ಲಾಧ್ಯಕ್ಷರಾದ ಬಸವರಾಜ್ ಎಂ. ಅವರು ಸಂಘಟನೆಯ ಬಲವರ್ಧನೆಗಾಗಿ ಈ ಕೆಳಗಿನಂತೆ ಸಮರ್ಥ ಪದಾಧಿಕಾರಿಗಳನ್ನು ಆಯ್ಕೆ ಮಾಡಿ ಆದೇಶ ಹೊರಡಿಸಿದ್ದಾರೆ.

ನೇಮಕಗೊಂಡ ಪದಾಧಿಕಾರಿಗಳು.ಪದಾಧಿಕಾರಿಯ ಹೆಸರು ವಹಿಸಲಾದ ಜವಾಬ್ದಾರಿ ಯವನೂರಪ್ಪ ಅಧ್ಯಕ್ಷರು, ಲಿಂಗಸಗೂರು ನಗರ ಘಟಕ ಮರಿದೇವಪ್ಪ ಪ್ರಧಾನ ಕಾರ್ಯದರ್ಶಿ, ಲಿಂಗಸಗೂರು ತಾಲೂಕು ರಾಯಪ್ಪ ಉಪಾಧ್ಯಕ್ಷರು, ಲಿಂಗಸಗೂರು ನಗರ ಘಟಕ ಸಂಘಟನಾ ಬಲವರ್ಧನೆಗೆ ಕರೆ: ನೇಮಕಾತಿ ಬಳಿಕ ಮಾತನಾಡಿದ ಜಿಲ್ಲಾಧ್ಯಕ್ಷ ಬಸವರಾಜ್ ಎಂ. ಅವರು, ಲಿಂಗಸಗೂರು ಭಾಗದಲ್ಲಿ ಕನ್ನಡದ ಹೋರಾಟಗಳನ್ನು ಚುರುಕುಗೊಳಿಸಲು ಮತ್ತು ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸಲು ಹೊಸ ತಂಡವನ್ನು ರಚಿಸಲಾಗಿದೆ. ನೂತನ ಪದಾಧಿಕಾರಿಗಳು ಸಂಘಟನೆಯ ಆಶಯದಂತೆ ಪ್ರಾಮಾಣಿಕವಾಗಿ ಕೆಲಸ ಮಾಡಲಿದ್ದಾರೆ, ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ನೂತನವಾಗಿ ಆಯ್ಕೆಯಾದ ಯವನೂರಪ್ಪ, ಮರಿದೇವಪ್ಪ ಮತ್ತು ರಾಯಪ್ಪ ಅವರಿಗೆ ತಾಲೂಕಿನ ಕನ್ನಡಾಭಿಮಾನಿಗಳು, ವಿವಿಧ ಸಂಘಟನೆಗಳ ಮುಖಂಡರು ಹಾಗೂ ಕಾರ್ಯಕರ್ತರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.



ರಾಜ್ಯ ಬಜೆಟ್ 2026-27 ಸಿರುಗುಪ್ಪದಲ್ಲಿ ಪ್ರಜಾಸೌಧ ನಿರ್ಮಿಸುವ ಭರವಸೆ

ಸಿರುಗುಪ್ಪ,ಮಾ.07-

16ನೇ ಹಣಕಾಸು ಆಯೋಗದ ಶಿಫಾರಸಿನಂತೆ 2026-27 ನೇ ಸಾಲಿಗೆ ಕೇಂದ್ರ ಸರ್ಕಾರದಿಂದ ವಿಪತ್ತು ಪರಿಹಾರ ಕಾರ್ಯಗಳಿಗೆ 1,162 ಕೋಟಿ ರೂ ಹಂಚಿಕೆ ನಿರೀಕ್ಷೆ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಬಳ್ಳಾರಿ ಜಿಲ್ಲೆಯ ಸಿರುಗುಪ್ಪದಲ್ಲಿ ಪ್ರಜಾಸೌಧ ನಿರ್ಮಾಣ ಸಿರುಗುಪ್ಪಕ್ಕೆ ಒಲಿದ ಪ್ರಜಾಸೌಧ ಸಿರುಗುಪ್ಪ ದಲ್ಲಿ ಒಂದೆಡೆ ಆಡಳಿತ ಕಚೇರಿಗಳಿಲ್ಲದೆ ಪರದಾಡುವಂತೆ ಪರಿಸ್ಥಿತಿ ಇರುವ ಕುರಿತು ಇದರ ಬಗ್ಗೆ 2025 ರಲ್ಲಿ ಸಿರುಗುಪ್ಪ ತಾಲೂಕದಲ್ಲಿ ಮಿನಿವಿಧಾನಸೌಧ ಭಾಗ್ಯ ವರದಿ ಪತ್ರಿಕೆಯಲ್ಲಿ ಪ್ರಕಟಗೊಂಡಿತು ಪ್ರಸಕ್ತ ಸಾಲಿನ ರಾಜ್ಯ ಸರ್ಕಾರದ ಬಜೆಟ್ ನಲ್ಲಿ ಸಿರುಗುಪ್ಪ ತಾಲೂಕಿಗೆ ಪ್ರಜಾಸೌಧ ಘೋಷಣೆ ಮಾಡಿದೆ ಈ ಭಾಗದ ಜನರಿಗೆ ಒಂದೇ ಸೂರಿನಡಿ ಸರ್ಕಾರದ ಎಲ್ಲಾ ಕಚೇರಿಗಳು ದೊರಕುವ ಕನಸು ಮೋಡಿದೆ ಶೈಕ್ಷಣಿಕವಾಗಿ ಆರರಿಂದ ಹನ್ನೆರಡನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡುವ ಕಟ್ಟಡ ಮತ್ತು ಇತರೆ ಕಾರ್ಮಿಕರ ಮಕ್ಕಳಿಗಾಗಿ 2026 27ನೇ ಸಾಲಿನಲ್ಲಿ 62 ಶ್ರಮಿಕ ಶಾಲೆಗಳು ಆರಂಭ ಮಾಡುವ ಬಗ್ಗೆ ಘೋಷಿಸಿದ್ದು ಇದರಲ್ಲಿ ಒಂದನೇ ಹಂತ ಸಿರುಗುಪ್ಪ ಎರಡನೇ ಹಂತ ಬಳ್ಳಾರಿ ಸಂಡೂರು ಒಳ ಗೊಂಡಿದೆ

ಇಂದು ರಾಜಾಬಾಗ್ ಸವಾರ್ ದರ್ಗಾದ ಉರುಸ್ ಆಚರಣೆ

ಕೊಪ್ಪಳ/ನಗರದ ಮಧ್ಯಭಾಗ ಪ್ರಮುಖ ಜವಾಹರ್ ರಸ್ತೆ ಬಳಿ ಇರುವ ಪುರಾತನ ಕಾಲದ ಐತಿಹಾಸಿಕ ಧಾರ್ಮಿಕ ಸುಕ್ಷೇತ್ರ, ಹಿಂದೂ ಮುಸ್ಲಿಮರ ಭವ್ಯಕ್ಯತೆಯ ಪ್ರತೀಕ ಹಜರತ್ ರಾಜಾ ಬಾಗ್ ಸವಾರ್ ದರ್ಗಾದ ಉರುಸ್ ಆಚರಣೆ ಪ್ರತಿ ವರ್ಷದಂತೆ ಈ ವರ್ಷವೂ ಸಹ ಸಡಗರ ಸಂಭ್ರಮದಿಂದ ಆಚರಿಸಲಾಗುತ್ತಿದೆ,



ದಿ, 7 ರ ಶನಿವಾರ ಗಂಧ ದೊಂದಿಗೆ ಆರಂಭ ಗೊಳ್ಳಲಿರುವ ಉರುಸ್ ಆಚರಣೆ ದಿನಾಂಕ 8ರ ರವಿವಾರ ಬೆಳಿಗ್ಗೆಯಿಂದ ರಾತ್ರಿ ವರೆಗೆ ಉರುಸ್ ಆಚರಣೆ ಧಾರ್ಮಿಕ ಮತ್ತು ಸಾರ್ವಜನಿಕ ಕಾರ್ಯಕ್ರಮಗಳು ಜರುಗಲಿದೆ, ದರ್ಗಾ ಆಡಳಿತ ಮಂಡಳಿ ಅಧ್ಯಕ್ಷರಾದ ಮೌಲಾ ಹುಸೇನ್ ಜಮೇದಾರ್ ನೇತೃತ್ವದಲ್ಲಿ ಕಾರ್ಯದರ್ಶಿ ಹಾಗೂ ನ್ಯಾಯವಾದಿ ಅಬ್ದುಲ್ ಗನಿ ಅಲಿಯಾಸ್ ಅಫ್ಸ ರ್ ಸಾಬ್ ರವರ ಉಪಸ್ಥಿತಿಯಲ್ಲಿ ಮುಸ್ಲಿಂ ಸಮಾಜದ ಧಾರ್ಮಿಕ ಗುರುಗಳು ಸಮಾಜದ ಎಲ್ಲಾ ಮುಖಂಡರು ಸಮಾಜದ ಜನಪ್ರತಿನಿಧಿಗಳು ಉರೂಸ್ ಆಚರಣೆ ಕಾರ್ಯಕ್ರಮದ ಸಂದರ್ಭದಲ್ಲಿ ಉಪಸ್ಥಿತರಿರುವವರು ಎಂದು ದರ್ಗಾದ ಮುಜಾವರ್ ಮರ್ದಾನ್ ಅಲಿ ಮುಜಾವರ್ ಪ್ರಕಟಣೆಯಲ್ಲಿ ತಿಳಿಸಿ ಸರ್ವರನ್ನು ಸ್ವಾಗತಿಸಿದ್ದಾರೆ,

ಯಂಕಪ್ಪ ಫಿರಂಗಿ: ಸರಕಾರಿ ಪ್ರೌಢಶಾಲೆ ಪೋಲೀಸ್ ಕಾಲೋನಿ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಬೀಳ್ಕೋಡುಗೆ

ಕಷ್ಟವೇ ಸುಖದ ಮಾರ್ಗ ಎಂದು ಹೇಳಿದರು. ಈ ಸಂದರ್ಭದಲ್ಲಿ ಶಾಲೆಯ 8,9,ನೇ ತರಗತಿಯ ಮಕ್ಕಳಿಗೆ ಉತ್ತಮ ವಿದ್ಯಾರ್ಥಿಗಳು ಎಂದು ಸನ್ಮಾನಿಸಿದರು ಈ ಸಂದರ್ಭದಲ್ಲಿ ಶ್ರೀ ಗೋವಿಂದಪ್ಪ ಹಿರಿಯ ಶಿಕ್ಷಕರು ,ಎಸ್ಡಿಎಂಸಿ ಅಧ್ಯಕ್ಷರು ಶ್ರೀ ಜೈನುಲ್ಲಾಬುದ್ದಿನ್ ,ಉಪಾಧ್ಯಕ್ಷರು ಶ್ರೀ ಚಂದ್ರಶೇಖರ ,ಹಿರಿಯ ಶಿಕ್ಷ

3/6, 19:08 ಯಂಕಪ್ಪ ಫಿರಂಗಿ: ಹಿರಿಯ ಶಿಕ್ಷಣ ಪ್ರೇಮಿ ಶ್ರೀ ಸೈಯ್ಯದ್ ಇಸ್ಮಾಯಿಲ್, ಶ್ರೀ ಕೃಷ್ಣಪ್ಪ ನಿವೃತ್ತಿ ಶಿಕ್ಷಕರು, ಶ್ರೀ ಯಂಕಪ್ಪ ಪಿರಂಗಿ ದೈಹಿಕ ಶಿಕ್ಷಣ ಶಿಕ್ಷಕರು ,ಶ್ರೀ ಮಲ್ಲಿಕಾರ್ಜುನ ಶಿಕ್ಷಕರು, ಶ್ರೀ ಮತಿ ಕೋಮಲ, ಶ್ರೀ ಮತಿ ರುಬಿನಾ ,ಶ್ರೀ ಮತಿ ಉಷಾ ಬಾಯಿ ಶ್ರೀ ಮತಿ ಸುಜಾತ ಪಾಟೀಲ್ ಶಿಕ್ಷಕರ ಶ್ರೀ ಚಂದ್ರಶೇಖರ ಪೋಲೀಸ್ ಕಾಲೋನಿ ವೇದಿಕೆಯಲ್ಲಿ ಉಪಸ್ಥಿತಿ ಇದ್ದರು

ರಾಯಚೂರಿನ ವಿದ್ಯಾಶ್ರೀಗೆ ಚಿನ್ನದ ಪದಕ

ಪ್ರಾಧ್ಯಾಪಕರು ಹಾಗೂ ಸಹಪಾಠಿಗಳು ಸಂತೋಷ ವ್ಯಕ್ತಪಡಿಸಿದ್ದಾರೆ.

ವಿದ್ಯಾಶ್ರೀ ಅವರು ರಾಯಚೂರು ನಗರದ ಕಂದುಕೂರಿ ಬಸವರಾಜಗೌಡ ಹಾಗೂ ಬಸಮ್ಮ ದಂಪತಿಗಳ ಪುತ್ರಿಯಾಗಿದ್ದಾರೆ. ತಮ್ಮ ಮಗಳ ಈ ಸಾಧನೆಗೆ ಪೋಷಕರು ಸಂತೋಷ ವ್ಯಕ್ತಪಡಿಸಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಉನ್ನತ ಸಾಧನೆ ಮಾಡಲಿ ಎಂದು ಆಶಿಸಿದ್ದಾರೆ.

ಈ ಸಾಧನೆಗೆ ನವೋದಯ ಎಜುಕೇಶನ್ ಸಂಸ್ಥೆಯ ಆಡಳಿತ ಮಂಡಳಿ, ಕಾಲೇಜಿನ ಪ್ರಾಂಶುಪಾಲರು, ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ವಿದ್ಯಾಶ್ರೀ ಅವರನ್ನು ಅಭಿನಂದಿಸಿ ಭವಿಷ್ಯದಲ್ಲಿ ಇನ್ನಷ್ಟು ಸಾಧನೆ ಮಾಡುವಂತೆ ಶುಭ ಹಾರೈಸಿದ್ದಾರೆ.

ವಿದ್ಯಾಶ್ರೀ ಅವರ ಈ ಸಾಧನೆ ರಾಯಚೂರು ಜಿಲ್ಲೆಯ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದ್ದು, ಪರಿಶ್ರಮ ಹಾಗೂ ಗುರಿಯೊಂದಿಗೆ ಓದಿದರೆ ಯಶಸ್ಸು ಸಾಧ್ಯ ಎಂಬುದನ್ನು ಸಾಬೀತುಪಡಿಸಿದೆ.

ಜಿಲ್ಲೆಯ ಜನರ ನಿರೀಕ್ಷೆಗಳನ್ನು ನಿರ್ಲಕ್ಷಿಸಿದ ರಾಜ್ಯ ಬಜೆಟ್

ಸಿಂಧನೂರು : ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿರುವ ಬಜೆಟ್. ರಾಯಚೂರು ಜಿಲ್ಲೆಯ ಜನರ ನಿರೀಕ್ಷೆಗಳನ್ನು ನಿರ್ಲಕ್ಷಿಸಿದ ರಾಜ್ಯ ಬಜೆಟ್ ಆಗಿದೆ. ಹಟ್ಟಿ ಚಿನ್ನದ ಗಣಿ ವಿಸ್ತರಣೆ ಮತ್ತು ನವಲಿ ಸಮಾನಾಂತರ್ ಜಲಾಶಯ. ಹಾಗೂ. ಜವಳಗೇರಾ. ಸಿ ಎಸ್ ಎಫ್ ಭೂಮಿಯಲ್ಲಿ ವಿಶ್ವವಿದ್ಯಾಲಯ ಸ್ಥಾಪನೆಯನ್ನು ನಿರ್ಲಕ್ಷಿಸಿರುವುದು.. ಸರಕಾರದ ಜನ ವಿರೋಧಿ ಧೋರಣೆಯನ್ನು ಎತ್ತಿ ತೋರಿಸುತ್ತದೆ. ಎಂದು. ಸಿ ಪಿ ಐ. (ಎಂಎಲ್) ರೆಡ್ ಸ್ಟಾರ್ ರಾಜ್ಯ ಸಮಿತಿ ಸದಸ್ಯ. ಎಂ ಗಂಗಾಧರ್. ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಶುಕ್ರವಾರ ರಂದು. ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿರುವ. ಅವರು ಮುಖ್ಯಮಂತ್ರಿ ಮಂಡಿಸಿರುವ ಬಜೆಟ್ ನಲ್ಲಿ. ರಾಯಚೂರಿನಲ್ಲಿ ಕೃತಕ ಬುದ್ಧಿಮತ್ತೆ. (ಎ ಐ) ಸ್ಥಾಪನೆ. ರಾಯಚೂರು ಮಹಾನಗರ ಪಾಲಿಕೆ ಅಭಿವೃದ್ಧಿ. ಇ ಎಸ್ ಐ ಆಸ್ಪತ್ರೆ ಮೇಲ್ದರ್ಜೆಗೆ. ಟ್ರಾಮ ಸೆಂಟರ್ ನಿರ್ಮಾಣ. ಅಂಬಾ ಮಠದಲ್ಲಿ. ವಸತಿ ಯುಕ್ತ ಪ್ರಥಮ ದರ್ಜೆ ಕಾಲೇಜು. ಮಸ್ಕಿಗೆ ಕ್ರೀಡಾಂಗಣ. ಪಾಮನ್ ಕಲ್ಲೂರ್. ಸಾಲ್ಗುಂದ. ಜಾಲವಾಡಗಿ. ಮಾನ್ವಿ. ಯ ರದಿಹಾಳ. ಏತ ನೀರಾವರಿ. ಹಾಗೂ ಮುಖ್ಯವಾಗಿ.ಜನರ ಜೀವನಾಡಿ. ತುಂಗಭದ್ರಾ ಡ್ಯಾಮ್ ನ. 33 ಕ್ರಸ್ಟ್ ಗೇಟ್. ಹೊಸ ನಿರ್ಮಾಣ ಬಜೆಟ್ನಲ್ಲಿ ಘೋಷಣೆ ಮಾಡಲಾಗಿದೆ. ಇದು. ಸ್ವಾಗತ ಅರ್ಹ ಕ್ರಮವಾಗಿದೆ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರದಂದು ಮಂಡಿಸಿದ. 2026.27ನೇ ಸಾಲಿನ ಬಜೆಟ್. ರಾಜ್ಯದ ದುಡಿಯುವ ಜನತೆ. ರೈತರು ಮತ್ತು ನಿರುದ್ಯೋಗಿ ಯುವಕರ ಆಸೆ ಆಕಾಂಕ್ಷೆಗಳನ್ನು ಪೂರೈಸುವಲ್ಲಿ ವಿಫಲವಾಗಿದೆ ಎಂದು ಖಂಡಿಸಿದರು. ರಾಯಚೂರು ಜಿಲ್ಲೆಯ ಜನರು ಹಲವು ವರ್ಷಗಳಿಂದ ಆಗ್ರಹಿಸುತ್ತಿರುವ ಪ್ರಮುಖ ಅಭಿವೃದ್ಧಿ ಯೋಜನೆಗಳ ಕುರಿತು. ಬಜೆಟ್ ಸಂಪೂರ್ಣ ಮೌನವಾಗಿರುವುದು ಸರ್ಕಾರದ ಜನ ವಿರೋಧಿ ಧೋರಣೆಯನ್ನು ಬಯಲಿ ಗೆಳೆಯುತ್ತದೆ. ಸಾವಿರಾರು ನಿರುದ್ಯೋಗಿಗಳಿಗೆ ಉದ್ಯೋಗವಕಾಶಗಳನ್ನು ಸೃಷ್ಟಿಸಬಲ್ಲ. ಹಟ್ಟಿ ಚಿನ್ನದ ಗಣಿ ವಿಸ್ತರಣೆ ಯೋಜನೆ ಕುರಿತು ಯಾವುದೇ ಘೋಷಣೆ ಇಲ್ಲದಿರುವುದು ಅತ್ಯಂತ ದುಃಖಕರ. ಈ ಯೋಜನೆ ವಿಸ್ತರಣೆಗೊಂಡಿದ್ದರೆ. ರಾಯಚೂರು ಜಿಲ್ಲೆಯ ಸಾವಿರಾರು ಯುವಕರಿಗೆ ನೇರ ಹಾಗೂ ಪರೋಕ್ಷವಾಗಿ ಉದ್ಯೋಗ ಸಿಗಬಹುದಿತ್ತು. ಅದೇ ರೀತಿ ಕೃಷಿ ಮತ್ತು ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಅತ್ಯಂತ ಅಗತ್ಯವಾಗಿರುವ. ನವಲಿ ಸಮಾನಾಂತರ ಜಲಾಶಯ ನಿರ್ಮಾಣ ಯೋಜನೆಗೂ ಬಜೆಟ್ ನಲ್ಲಿ ಹಣ ಮೀಸಲಿಡದಿರುವುದು ಜಿಲ್ಲೆಯ ರೈತರಿಗೆ ಮಾಡಿದ ದೊಡ್ಡ ಅನ್ಯಾಯವಾಗಿದೆ. ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ನೀರಿನ ಸಮರ್ಪಕ ಬಳಕೆ ಹಾಗೂ ಭವಿಷ್ಯದ ನೀರಿನ ಭದ್ರತೆಗಾಗಿ ಈ ಯೋಜನೆ ಅತ್ಯಂತ ಅಗತ್ಯವಾಗಿದೆ.



ಇನ್ನೊಂದೆಡೆ ರಾಯ್ಚೂರು ಜಿಲ್ಲೆಯ ಜವಳಗೆರ ಪ್ರದೇಶದಲ್ಲಿರುವ ಸುಮಾರು ರೂ.7,000 ಎಕರೆ. (ಅ ಖ ಈ) ಭೂಮಿ ಸುಮಾರು ವರ್ಷಗಳಿಂದ ಪಾಳು ಬಿದ್ದಿದೆ. ಈ ಭೂಮಿಯಲ್ಲಿ ಒಂದು ದೊಡ್ಡ ರಾಜ್ಯ ವಿಶ್ವವಿದ್ಯಾಲಯ ಸ್ಥಾಪನೆ ಮಾಡುವ ಮೂಲಕ ಕಲ್ಯಾಣ ಕರ್ನಾಟಕ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ಉನ್ನತ ಮಟ್ಟದ ಶಿಕ್ಷಣದ ಅವಕಾಶ ಕಲ್ಪಿಸಬಹುದಾಗಿತ್ತು. ಆದರೆ ಸರ್ಕಾರ ಅದಕ್ಕೂ ಯಾವುದೇ ಘೋಷಣೆ ಮಾಡದಿರುವುದು ಶಿಕ್ಷಣ ಮತ್ತು ಪ್ರಾದೇಶಿಕ ಅಭಿವೃದ್ಧಿ ಬಗ್ಗೆ ಸರ್ಕಾರದ ನಿರ್ಲಕ್ಷವನ್ನು ತೋರುತ್ತದೆ. ರಾಯಚೂರು. ಜಿಲ್ಲೆಯ ಅಭಿವೃದ್ಧಿಗೆ ಅಗತ್ಯವಿರುವ ಅಸಂಘಟಿತ ಕಾರ್ಮಿಕರನ್ನು ಖಾಯಂಗೊಳಿಸದೆ ಕಡೆಗಣಿಸಿರುವುದು. ಸೇರಿದಂತೆ ಪ್ರಮುಖ ಯೋಜನೆಗಳನ್ನು ಕಡೆಗಣಿಸುವುದು ಸರ್ಕಾರದ ಅಭಿವೃದ್ಧಿ ಘೋಷಣೆಗಳ ನಿಜ ಸ್ವರೂಪವನ್ನು ಬಯಲಿ ಗೆಳೆಯುತ್ತದೆ. ಎಂದರು ಆದ್ದರಿಂದ ಸರ್ಕಾರ ತಕ್ಷಣವೇ ಹಟ್ಟಿ ಚಿನ್ನದ ಗಣಿ ವಿಸ್ತರಣೆ ಯೋಜನೆಗೆ ಅನುಮೋದನೆ ನೀಡಬೇಕು. ನವಲಿ ಸಮಾನಾಂತರ ಜಲಾಶಯ ನಿರ್ಮಾಣಕ್ಕೆ ಅಗತ್ಯ ಹಣ ಮೀಸಲಿಡಬೇಕು. ಹಾಗೆ ಜವಳಗೇರಿ (ಅ ಖ ಈ) ಭೂಮಿಯಲ್ಲಿ ರಾಜ್ಯ ವಿಶ್ವವಿದ್ಯಾಲಯ ಸ್ಥಾಪನೆ ಘೋಷಿಸಬೇಕು. ಹಾಗೂ ಅಸಂಘಟಿತ ಕಾರ್ಮಿಕರನ್ನು ಖಾಯ ಮಾಡಬೇಕು. ಜನರ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಸಿ.ಪಿ.ಐ (ಎಂಎಲ್) ರೆಡ್ ಸ್ಟಾರ್ ನೇತೃತ್ವದಲ್ಲಿ. ರೈತರು ಕಾರ್ಮಿಕರು. ಯುವಕರು. ಮತ್ತು.ವಿದ್ಯಾರ್ಥಿಗಳನ್ನು. ಸಂಘಟಿಸಿ ಹೋರಾಟಗಳನ್ನು ಆರಂಭಿಸಲಾಗುವುದು ಎಂದು ಅವರು ಸರಕಾರಕ್ಕೆ ಎಚ್ಚರಿಸಿದರು.

ಸಿದ್ದರಾಮಯ್ಯನವರ ದಾಖಲೆಯ ಬಜೆಟ್ ನಲ್ಲಿ ಅಫಜಲಪುರ ಕ್ಷೇತ್ರಕ್ಕೆ ಬಂಪರ ಅರುಣಕುಮಾರ ಪಾಟೀಲ


ಕಲಬುರಗಿ:2025-26 ನೇ ಸಾಲಿನ ಸಿದ್ದರಾಮಯ್ಯನವರ ದಾಖಲೆಯ 17 ನೇ ಬಜೆಟನಲ್ಲಿ ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಿದ್ದು,ಅದರಲ್ಲೂ ಅಫಜಲಪುರ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡಿರುವುದು ತಾಲೂಕಿನ ಶ್ರೇಯೋದ್ಯಕ್ಕೆ ನಾಂದಿಯಾಗಿದೆ ಎಂದು ಕೆಕೆಆರಟಿಸಿ ಅಧ್ಯಕ್ಷ ಅರುಣಕುಮಾರ ಪಾಟೀಲ ಹರ್ಷ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರು ಚಡಚಣ,ಝಳಕಿ,ಇಂಡಿ , ಅಫಜಲಪುರ ಮಾರ್ಗವಾಗಿ ಗಾಣಗಾಪುರವರೆಗೆ ಒಟ್ಟು 115 ಕಿ.ಮೀ. ರಸ್ತೆ ಅಭಿವೃದ್ಧಿ ಮಾಡುವುದಾಗಿ ಘೋಷಿಸಿರುವುದು ಅತ್ಯಂತ ಸಂತೋಷಕರ ಹಾಗೂ ಐತಿಹಾಸಿಕ ನಿರ್ಧಾರವಾಗಿದೆ. ಈ ಮಹತ್ವದ ಯೋಜನೆಯಿಂದ ಸಂಚಾರ ವ್ಯವಸ್ಥೆ ಸುಧಾರಿಸುವುದರ ಜೊತೆಗೆ ವ್ಯಾಪಾರವಹಿವಾಟು, ಕೃಷಿ ಚಟುವಟಿಕೆಗಳು ಹಾಗೂ ಪ್ರವಾಸೋದ್ಯಮಕ್ಕೂ ಹೊಸ ಉತ್ತೇಜನ ದೊರೆಯಲಿದೆ. ವಿಶೇಷವಾಗಿ ಗಾಣಗಾಪುರ ಕ್ಷೇತ್ರಕ್ಕೆ ಭೇಟಿ ನೀಡುವ ಭಕ್ತರಿಗೆ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಲು ಇದು ಮಹತ್ವದ ಹೆಜ್ಜೆಯಾಗಿದೆ.

ಇದೇ ವೇಳೆ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯ ಮೈಕ್ರೋ ಅನುದಾನದಡಿ ಕಲಬುರಗಿ ಜಿಲ್ಲೆಯ ಅಫಜಲಪುರ ಪಟ್ಟಣದಲ್ಲಿ 150 ಕೋಟಿ ರೂ. ವೆಚ್ಚದಲ್ಲಿ ಒಳಚರಂಡಿ ಕಾಮಗಾರಿಗಳನ್ನು ಘೋಷಿಸಿದ್ದು ಇದರಿಂದ ಪಟ್ಟಣದ ಮೂಲಸೌಕರ್ಯ, ಸ್ವಚ್ಛತೆ ಹಾಗೂ ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಹೆಚ್ಚಿನ ಬಲ ದೊರೆಯಲಿದೆ ಎಂದರು.


ಅಲ್ಲದೆ ಅಫಜಲಪುರ ಪಟ್ಟಣದಲ್ಲಿ 35 ಕೋಟಿ ರೂ. ವೆಚ್ಚದಲ್ಲಿ ನೋಂದಾಯಿತ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕಾಗಿ ವಸತಿ ಶಾಲೆಗಳನ್ನು ಸ್ಥಾಪಿಸುವ ಘೋಷಣೆ ಮಾಡಿರುವುದು ನೋಂದಾಯಿತ ಕಾರ್ಮಿಕ ವರ್ಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಅವಕಾಶ ಕಲ್ಪಿಸುವ ಈ ಯೋಜನೆ ಸಮಾಜದ ಹಿಂದುಳಿದ ವರ್ಗಗಳ ಶೈಕ್ಷಣಿಕ ಸಬಲೀಕರಣಕ್ಕೆ ಮಹತ್ವದ ಹೆಜ್ಜೆಯಾಗಲಿದೆ.

ಒಟ್ಟಾರೆ ಈ ಬಜೆಟ್ ಸಮಾಜಮುಖಿ ಚಿಂತನೆಯೊಂದಿಗೆ ರೂಪುಗೊಂಡ ಜನಪರ ಬಜೆಟ್ ಆಗಿದ್ದು, 11 ಮಾದರಿ ಆರ್ಥಿಕತೆಯಡಿ ಶಿಕ್ಷಣ, ಉದ್ಯೋಗ, ಆರೋಗ್ಯ, ಕೃಷಿ ಹಾಗೂ ಸಾರಿಗೆ ಕ್ಷೇತ್ರಗಳಿಗೆ ಆದ್ಯತೆ ನೀಡಲಾಗಿದೆ. ರೈತರ ಸ್ವಾವಲಂಬನೆಗೆ ಸಹಾಯಧನ ಕೃಷಿ ವಿಸ್ತಾರ ಯೋಜನೆ, ಶೂನ್ಯ ಬಡ್ಡಿದರ ಸಾಲ, ರೈತ ಮಾಲ್‌ಗಳು, ಸಿಲ್ಕ್ ಪಾರ್ಕ್‌ಗಳು ಮತ್ತು ಪಶುಸಂಗೋಪನೆಗೆ ಪ್ರೋತ್ಸಾಹಧನ ನೀಡಲಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ 800 ಕೆಪಿಎಸ್ ಶಾಲೆಗಳು ಮತ್ತು 56,600ಕ್ಕೂ ಹೆಚ್ಚು ಹುದ್ದೆಗಳ ನೇಮಕಾತಿ ಘೋಷಿಸಲಾಗಿದೆ.



ಆರೋಗ್ಯ ಕ್ಷೇತ್ರದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು, ಇಂದಿರಾ ಆಹಾರ ಕಿಟ್ ಹಾಗೂ ಮನೆ ಇಲ್ಲದವರಿಗೆ ನಮ್ಮ ಮನೆ ಯೋಜನೆ ಘೋಷಿಸಲಾಗಿದ್ದು, , ಡಿಜಿಟಲೀಕರಣ ಮತ್ತು ವ್ಯವಸ್ಥೆಗಳ ಮೂಲಕ ಪಾರದರ್ಶಕ ಆಡಳಿತಕ್ಕೆ ಒತ್ತು ನೀಡಲಾಗಿದೆ. ಜೊತೆಗೆ ಸಾರ್ವಜನಿಕ ಸಾರಿಗೆ ಬಲಪಡಿಸಲು 1000 ಹೊಸ ಬಸ್‌ಗಳ ಖರೀದಿ ಹಾಗೂ ಎಲೆಕ್ಟ್ರಿಕ್ ವಾಹನಗಳಿಗೆ 1550 ಚಾರ್ಜಿಂಗ್ ಪಾಯಿಂಟ್‌ಗಳ ಸ್ಥಾಪನೆ ಮಾಡುವುದು ಸೇರಿದಂತೆ ಇನ್ನೂ ಅನೇಕ ಮಹತ್ವದ ಯೋಜನೆಗಳ ನಿರ್ಧಾರ ಕೈಗೊಳ್ಳಲಾಗಿದೆ.

ಒಟ್ಟಾರೆ ಈ ಬಜೆಟ್ ರೈತರು, ಕಾರ್ಮಿಕರು, ಮಹಿಳೆಯರು ಮತ್ತು ಯುವಜನತೆಗೆ ಶಕ್ತಿ ನೀಡುವ ಜೊತೆಗೆ ಅಫಜಲಪುರ ಕ್ಷೇತ್ರ ಸೇರಿದಂತೆ ಈ ಭಾಗದ ಸಮಗ್ರ ಅಭಿವೃದ್ಧಿಗೆ ಹೊಸ ವೇಗ ನೀಡುವ ಜನಪರ ಬಜೆಟ್ ಆಗಿದೆ ಎಂದರು.



ಶ್ರೀಶೈಲ ಪಾದಯಾತ್ರೆ ಭಕ್ತರಿಗೆ ಅನ್ನದಾಸೋಹ

ಲಿಂಗಸುಗೂರು,ಮಾ.06-

ಶ್ರೀಶೈಲ ಕ್ಷೇತ್ರಕ್ಕೆ ಪಾದಯಾತ್ರೆ ಮಾಡುವ ಭಕ್ತಾದಿಗಳಿಗೆ ಲಿಂಗಸುಗೂರು ಪಟ್ಟಣದಲ್ಲಿ ಸಮಾಜಸೇವಕ ನವೀನ್ ಮೇಟಿ ಅವರಿಂದ ಅನ್ನದಾಸೋಹವನ್ನು ಏರ್ಪಡಿಸಲಾಗಿತ್ತು.

ಪಾದಯಾತ್ರೆಯಲ್ಲಿ ಭಾಗವಹಿಸಿ ದೂರದಿಂದ ಆಗಮಿಸಿದ ಭಕ್ತರಿಗೆ ಭಕ್ತಿಭಾವದಿಂದ ಊಟ, ನೀರು ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಒದಗಿಸಿ ಸೇವೆ ಸಲ್ಲಿಸಲಾಯಿತು.

ಶ್ರೀಶೈಲ ಮಲ್ಲಿಕಾರ್ಜುನ ದೇವರ ದರ್ಶನಕ್ಕಾಗಿ ತೆರಳುತ್ತಿರುವ ಭಕ್ತರು ಈ ಅನ್ನದಾಸೋಹದಲ್ಲಿ ಭಾಗವಹಿಸಿ ತೃಪ್ತಿಯಿಂದ ಭೋಜನ ಸೇವಿಸಿದರು.

ಈ ಸಂದರ್ಭದಲ್ಲಿ ಭಕ್ತರು ನವೀನ್ ಮೇಟಿ ಅವರ ಸೇವಾಭಾವವನ್ನು ಪ್ರಶಂಸಿಸಿದರು.

ಕಾರ್ಯಕ್ರಮದಲ್ಲಿ ಸ್ಥಳೀಯ ಯುವಕರು ಹಾಗೂ ಸ್ನೇಹಿತರು ಸಹ ಭಾಗವಹಿಸಿ ಅನ್ನದಾಸೋಹ ಕಾರ್ಯದಲ್ಲಿ ಸಹಕರಿಸಿದರು. ಭಕ್ತರಿಗೆ ಸೇವೆ ಸಲ್ಲಿಸುವುದು ಪುಣ್ಯದ ಕಾರ್ಯವಾಗಿದ್ದು, ಮುಂದೆಯೂ ಇಂತಹ ಸೇವಾ ಕಾರ್ಯಗಳನ್ನು ಮುಂದುವರಿಸುವುದಾಗಿ ನವೀನ್ ಮೇಟಿ ತಿಳಿಸಿದ್ದಾರೆ.

ನಿಮ್ಮೂರು ಸುದ್ದಿ

ಸಂಪಾದಕೀಯ

ತೈಲ ಖರೀದಿಯಲ್ಲಿ ವಿಶ್ವಗುರುವಿಗೆ ದೊಣ್ಣೆ ನಾಯಕನ ಅಪ್ಪಣೆ ಯಾಕೆ?



ಒಂದು ಸ್ವತಂತ್ರ ರಾಷ್ಟ್ರವು ತನ್ನ ಆರ್ಥಿಕ ಮತ್ತು ಇಂಧನ ಅಗತ್ಯಗಳನ್ನು ಪೂರೈಸಲು ಮತ್ತೊಂದು ರಾಷ್ಟ್ರದ 'ಅನುಮತಿ' ಪಡೆಯುವುದು ಎಂದರೇನು? ಇದು, ಭಾರತದ ಸ್ವಾಭಿಮಾನ, ಸಾರ್ವಭೌಮತೆ ಮತ್ತು ಸ್ವಾತಂತ್ರ್ಯವನ್ನು ಮತ್ತೊಂದು ರಾಷ್ಟ್ರದ ಅಧೀನಕ್ಕಿಟ್ಟಂತಲ್ಲವೇ?

ಇರಾನ್ ಮೇಲೆ ಅಮೆರಿಕ-ಇಸ್ರೇಲ್ ದಾಳಿ ಆರಂಭಿಸಿ ಒಂದು ವಾರ ಕಳೆದಿದೆ. ಮಧ್ಯಪ್ರಾಚ್ಯವು ಉದ್ವಿಗ್ನತೆಗೆ ತುತ್ತಾಗಿದೆ. ಇರಾನ್ ತನ್ನ ಹಾರ್ಮುಜ್ ಜಲಸಂಧಿಯನ್ನು ಮುಚ್ಚಿದೆ. ಪರಿಣಾಮ, ತೈಲ ಹೊತ್ತ ಸುಮಾರು 706 ಟ್ಯಾಂಕರ್‌ಗಳು ಜಲಸಂಧಿಯ ಇಕ್ಕೆಲಗಳಲ್ಲಿ ನಿಂತಿವೆ. ಜಾಗತಿಕ ತೈಲ ಬಿಕ್ಕಟ್ಟು ಎದುರಾಗುತ್ತಿದೆ. ಭಾರತದ ಮೇಲೂ ಪರಿಣಾಮ ಬೀರುವ ಸಾಧ್ಯತೆಗಳಿದ್ದು, ಇಂಧನ ಕೊರತೆಯನ್ನು ನಿಭಾಯಿಸಲು ರಷ್ಯಾದಿಂದ ಕಚ್ಚಾ ತೈಲ ಖರೀದಿಸಲು ಭಾರತ ಮುಂದಾಗಿದೆ. ಆದರೆ, ರಷ್ಯಾದ ತೈಲ ಖರೀದಿಗೆ ಭಾರತ, ಅಮೆರಿಕದ ಅಪ್ಪಣೆಗಾಗಿ ಕಾದಿದೆ. ಇದು, ಭಾರತದ ಸಾರ್ವಭೌಮತೆಯನ್ನು ಅಣಕಿಸುವ ರೀತಿಯಲ್ಲಿದೆ.

ಮಧ್ಯಪ್ರಾಚ್ಯದಲ್ಲಿ ಸಂಘರ್ಷ ಉಲ್ಬಣಗೊಳ್ಳುತ್ತಿದ್ದಂತೆಯೇ ಹಾರ್ಮುಜ್ ಜಲಸಂಧಿಯನ್ನು ಇರಾನ್ ಮುಚ್ಚಿತು. ಪರಿಣಾಮವಾಗಿ, 2026ರ ದೈನಂದಿನ ವಹಿವಾಟಿನ ಸರಾಸರಿ 1.98 ಕೋಟಿ ಬ್ಯಾರೆಲ್‌ಗಳ ಪೈಕಿ 86%ರಷ್ಟು ವಹಿವಾಟು ನಿಂತುಹೋಗಿದೆ. ಏಷ್ಯಾ ಮತ್ತು ಯುರೋಪಿನ ಸಂಸ್ಕರಣಾಗಾರಗಳು ಅಮೆರಿಕ, ಪಶ್ಚಿಮ ಆಫ್ರಿಕಾ, ಬ್ರೆಜಿಲ್ ಹಾಗೂ ರಷ್ಯಾದಿಂದ ಪರ್ಯಾಯ ತೈಲಕ್ಕಾಗಿ ಹುಡುಕಾಟ ನಡೆಸುತ್ತಿವೆ. ಕೊಲ್ಲಿಯ ಕಚ್ಚಾ ತೈಲವನ್ನೇ ಹೆಚ್ಚಾಗಿ ಅವಲಂಬಿಸಿರುವ ಚೀನಾ ಮತ್ತು ಭಾರತವು ನೇರ ಹೊಡೆತ ಎದುರಿಸಿವೆ. ಆದಾಗ್ಯೂ, ಚೀನಾದ ಹಡಗುಗಳ ಸಂಚಾರಕ್ಕೆ ಇರಾನ್ ಅವಕಾಶ ನೀಡಿದೆ. ಆದರೆ, ಭಾರತವು ಸಂಕಷ್ಟಕ್ಕೆ ಸಿಲುಕಿದೆ.

ಕೆಲವು ತೈಲ ಉದ್ಯಮಗಳು ಮಾರ್ಚ್ 3ರಂದು ಅಂದಾಜಿಸಿದ್ದ ಪ್ರಕಾರ, ಭಾರತದ ಸಂಗ್ರಹಾಗಾರಗಳು, ಸಂಸ್ಕರಣಾಗಾರಗಳು ಹಾಗೂ ಬಂದರುಗಳಲ್ಲಿರುವ ಒಟ್ಟು ಕಚ್ಚಾ ತೈಲ ಮತ್ತು ಉತ್ಪನ್ನಗಳ ದಾಸ್ತಾನು ಸುಮಾರು 74 ದಿನಗಳ ಬೇಡಿಕೆಯನ್ನು ಪೂರೈಸಬಲ್ಲದು ಎಂದು ಪುರಿ ಹೇಳಿದ್ದರು. ಇದರಲ್ಲಿ ಕಚ್ಚಾ ತೈಲವು ಸುಮಾರು 17-18 ದಿನಗಳಿಗೆ, ಸಂಸ್ಕರಿಸಿದ ಇಂಧನಗಳು ಸುಮಾರು 20-21 ದಿನಗಳಿಗೆ ಹಾಗೂ ಎಲ್‌ಎನ್‌ಜಿ ಸಂಗ್ರಹವು ಸುಮಾರು 10-12 ದಿನಗಳಿಗೆ ಸಾಕಾಗಬಹುದು ಎಂದು ಹೇಳಲಾಗಿತ್ತು.

ಸಂಭವನೀಯ ಇಂಧನ ಬಿಕ್ಕಟ್ಟಿನ ಕುರಿತು ಪ್ರತಿಕ್ರಿಯಿಸಿದ್ದ ಕೇಂದ್ರ ಇಂಧನ ಸಚಿವ ಹರ್ದೀಪ್ ಸಿಂಗ್ ಪುರಿ, ''ನಾವು ಪರಿಸ್ಥಿತಿಯನ್ನು ನಿರಂತರವಾಗಿ ಗಮನಿಸುತ್ತಿದ್ದೇವೆ. ದೇಶದಲ್ಲಿ ಪ್ರಮುಖ ಪೆಟ್ರೋಲಿಯಂ ಉತ್ಪನ್ನಗಳ ಲಭ್ಯತೆ ಮತ್ತು ಕೈಗೆಟುಕುವ ಬೆಲೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ'' ಎಂದಿದ್ದರು.

ಇದೀಗ, ಭಾರತವು ರಷ್ಯಾದಿಂದ ತೈಲ ಖರೀದಿಗೆ ಮುಂದಾಗಿದೆ. ಅದೂ, ಅಮೆರಿಕ ಅಧ್ಯಕ್ಷ ಟ್ರಂಪ್ ಎಂಬ ದೊಣ್ಣೆ ನಾಯಕ ಅಪ್ಪಣೆಯೊಂದಿಗೆ. ಈಗ ಟ್ರಂಪ್ ಆಡಳಿತವು, ರಷ್ಯಾದಿಂದ ಭಾರತವು ತೈಲ ಖರೀದಿ ಮಾಡಲು 30 ದಿನಗಳ ತಾತ್ಕಾಲಿಕ ಅನುಮತಿ ನೀಡಿದೆ. ಅಂದರೆ, ಏಪ್ರಿಲ್ 4ರವರೆಗೆ ಮಾತ್ರವೇ ಭಾರತವು ರಷ್ಯಾದಿಂದ ಇಂಧನ ಖರೀದಿ ಮಾಡಬಹುದು.

''ಭಾರತವು ರಷ್ಯಾದ ತೈಲ ಖರೀದಿ ಮಾಡಲು ಅಮೆರಿಕವು 30 ದಿನಗಳ ವಿನಾಯತಿ ನೀಡಿದೆ. ಇದು, ಅಲ್ಪಾವಧಿಯ ಕ್ರಮ. ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷದಿಂದ ಎದುರಾಗುತ್ತಿರುವ ಸಂಭಾವ್ಯ ಪೂರೈಕೆ ಬಿಕ್ಕಟ್ಟನ್ನು ನಿರ್ವಹಿಸಲು ಭಾರತಕ್ಕೆ ಅವಕಾಶ ನೀಡಿದ್ದೇವೆ'' ಎಂದು ಅಮೆರಿಕದ ಹಣಕಾಸು ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಹೇಳಿದ್ದಾರೆ.

ಭಾರತ ವಿಶ್ವಗುರು ಎಂದು ಹೇಳಿಕೊಳ್ಳುವ ಪ್ರಧಾನಿ ಮೋದಿ ನೇತೃತ್ವದ ಭಾರತವು ತನ್ನ ತೈಲ ವಹಿವಾಟಿಗೆ ಟ್ರಂಪ್ ಅವರಿಂದ ಅನುಮತಿ ಪಡೆದಿದೆ.

ಅಮೆರಿಕ ಕೇವಲ ಅನುಮತಿ ನೀಡಿರುವುದು ಮಾತ್ರವಲ್ಲದೆ, ಭಾರತದ ಕುರಿತು ಅಪಹಾಸ್ಯವನ್ನೂ ಮಾಡಿದೆ. ಸಂದರ್ಶನವೊಂದರಲ್ಲಿ ಮಾತನಾಡಿರುವ ಸ್ಕಾಟ್ ಬೆಸೆಂಟ್, ''ಭಾರತೀಯರು ಒಳ್ಳೆಯ ನಟರು. ಈ ಶರತ್ಕಾಲದಲ್ಲಿ ನಿರ್ಬಂಧಿತ ರಷ್ಯಾದ ತೈಲ ಖರೀದಿಸುವುದನ್ನು ನಿಲ್ಲಿಸುವಂತೆ ನಾವು ಅವರಿಗೆ ಕೇಳಿದ್ದೆವು. ಅವರು ಹಾಗೆಯೇ ಮಾಡಿದರು. ಈಗ ರಷ್ಯಾದ ತೈಲ ಖರೀದಿಸಲು ನಾವು ಅನುಮತಿ ನೀಡಿದ್ದೇವೆ. ಅವರು ಖರೀದಿಸುತ್ತಿದ್ದಾರೆ'' ಎಂದು ಅಪಹಾಸ್ಯದ ಧಾಟಿಯಲ್ಲಿ ಮಾತನಾಡಿದ್ದಾರೆ.

ಇದು ಸ್ವಾಭಿಮಾನಿ ಭಾರತೀಯರನ್ನು ಸಿಟ್ಟಿಗೆಬ್ಬಿಸಿದೆ. ಒಂದು ಸ್ವತಂತ್ರ ರಾಷ್ಟ್ರವು ತನ್ನ ಆರ್ಥಿಕ ಮತ್ತು ಇಂಧನ ಅಗತ್ಯಗಳನ್ನು ಪೂರೈಸಲು ಮತ್ತೊಂದು ರಾಷ್ಟ್ರದ ಅನುಮತಿ ಪಡೆಯುವುದು ಎಂದರೇನು? ಇದು, ಭಾರತದ ಸ್ವಾಭಿಮಾನ, ಸಾರ್ವಭೌಮತೆ ಮತ್ತು ಸ್ವಾತಂತ್ರ್ಯವನ್ನು ಮತ್ತೊಂದು ರಾಷ್ಟ್ರದ ಅಧೀನಕ್ಕಿಟ್ಟಂತೆ ಎಂದು ಭಾರತೀಯರು ಆಕ್ರೋಶಗೊಂಡಿದ್ದಾರೆ.

ಆದರೆ, ಮೋದಿ ಸರ್ಕಾರ ಮತ್ತು ಬಿಜೆಪಿಗರು ಇದನ್ನು ರಾಜತಾಂತ್ರಿಕ ಫಲವೆಂದು ಹೇಳಿಕೊಳ್ಳುತ್ತಿದ್ದಾರೆ. ಮಣ್ಣಿಗೆ ಬಿದ್ದ ಜಟ್ಟಿಯಂತೆ ವರ್ತಿಸುತ್ತಿದ್ದಾರೆ. ಮೋದಿ ಸರ್ಕಾರವು ಅಮೆರಿಕ ಆದೇಶವನ್ನು ಶಿರಸಾ ಪಾಲಿಸುತ್ತಿರುವುದು ಅಥವಾ ಅಮೆರಿಕ ದೊಡ್ಡಣ್ಣನ ಧೋರಣೆಯಲ್ಲಿ ವರ್ತಿಸುತ್ತಿರುವುದು, ಇದೇ ಮೊದಲೇನೂ ಅಲ್ಲ. ಇದೇ ಕೊನೆಯೂ ಅಲ್ಲ.

ಪಹಲ್ಗಾಮ್ ದಾಳಿಯಿಂದಾಗಿ ಉಂಟಾದ ಭಾರತ-ಪಾಕಿಸ್ತಾನ ಸಂಘರ್ಷದಲ್ಲಿ ಕದನ ವಿರಾಮ ಘೋಷಿಸಿದ್ದು ನಾನೇ ಎಂದು ಟ್ರಂಪ್ ಈವರೆಗೆ ಸುಮಾರು 100 ಬಾರಿ ಹೇಳಿಕೊಂಡಿದ್ದಾರೆ. ಆದರೆ, ಮೋದಿ ಅವರು ಅದನ್ನು ಅಲ್ಲಗಳೆಯುವ ಅಥವಾ ಆ ಬಗ್ಗೆ ಪ್ರತಿಕ್ರಿಯಿಸುವ ಧೈರ್ಯ ಮಾಡಲಿಲ್ಲ. ತಮ್ಮ ಬದಿಯಲ್ಲೇ ನಿಂತು ಟ್ರಂಪ್, ಭಾರತದ ಮೇಲೆ ಪ್ರತಿಸುಂಕ ಹೇರುತ್ತೇವೆ ಎಂದಾಗಲೂ ಮೋದಿ ತುಟಿಬಿಚ್ಚಲಿಲ್ಲ. ತಾನು ಅಮೆರಿಕದಲ್ಲಿ ಇದ್ದಾಗಲೇ, ಭಾರತೀಯರ ಕೈಗೆ ಕೊಳ ಹಾಕಿ, ಮಿಲಿಟರಿ ವಿಮಾನದಲ್ಲಿ ಭಾರತಕ್ಕೆ ಗಡಿಪಾರು ಮಾಡಿದರೂ ಮೋದಿ ಉಸಿರೆತ್ತಲಿಲ್ಲ. ಭಾರತದ ಮೇಲೆ 25%, ನಂತರ 50% ಸುಂಕ ಹೇರಿದಾಗಲೂ ಮೋದಿ ಮಾತನಾಡಲಿಲ್ಲ.

ಮುಖ್ಯವಾಗಿ, ಭಾರತಕ್ಕೆ ರಷ್ಯಾ ಅಗ್ಗದ ಬೆಲೆಯಲ್ಲಿ ತೈಲ ರಫ್ತು ಮಾಡುತ್ತಿತ್ತು. ಇರಾನ್ ಕೂಡ ರೂಪಾಯಿಯಲ್ಲಿಯೇ ಭಾರತದೊಂದಿಗೆ ತೈಲ ವ್ಯವಹಾರ ಮಾಡುತ್ತಿತ್ತು. ಆದರೆ, ಈ ಎರಡೂ ರಾಷ್ಟ್ರಗಳ ಮಿತ್ರತ್ವಕ್ಕೆ ಮೋದಿ ಬೆಲೆ ಕೊಟ್ಟಿಲ್ಲ. ರಷ್ಯಾದ ತೈಲ ಖರೀದಿ ನಿಲ್ಲಿಸುವಂತೆ ಒತ್ತಾಯಿಸಿ ಅಮೆರಿಕ 50% ಸುಂಕ ಹೇರಿದಾಗ, ಮೋದಿ ಪ್ರತಿಕ್ರಿಯೆ ನೀಡಲಿಲ್ಲ. ಟ್ರಂಪ್ ಅವರೇ ಹೇಳುವಂತೆ, ಸುಂಕ ಹೇರಿಕೆ ವಿಚಾರವಾಗಿ ಮೋದಿಗೆ ಟ್ರಂಪ್ ನಾಲ್ಕು ಬಾರಿ ಕರೆ ಮಾಡಿದರೂ, ಮೋದಿ ಪ್ರತಿಕ್ರಿಯಿಸಿಲ್ಲ.

ಆದಾಗ್ಯೂ, ಇತ್ತೀಚೆಗೆ ಹೊರಬಂದ ಎಪ್‌ಸ್ಟೀನ್ ಫೈಲ್ಸ್ ನಮ್ಮ ಪ್ರಧಾನಿ ಮೋದಿ ಅವರನ್ನು ಮತ್ತಷ್ಟು ಜರ್ಜರಿತಗೊಳಿಸಿದೆ ಎಂದೇ ಹೇಳಲಾಗುತ್ತಿದೆ. ಎಪ್‌ಸ್ಟೀನ್ ಫೈಲ್ಸ್ ನಲ್ಲಿ ಮೋದಿ ಅವರ 2017ರಲ್ಲಿ ಇಸ್ರೇಲ್ ಭೇಟಿ ಮತ್ತು ಅಲ್ಲಿ ಅವರು ಹಾಡು ಹಾಡಿ, ನೃತ್ಯ ಮಾಡಿದ್ದು ಸೇರಿದಂತೆ ಹಲವು ರಹಸ್ಯ ವಿಚಾರಗಳಿವೆ ಎಂದು ಹೇಳಲಾಗುತ್ತಿದೆ. ಅಮೆರಿಕ ಉರುಳಿಸಿರುವ ಎಪ್‌ಸ್ಟೀನ್ ಫೈಲ್ಸ್ ದಾಳಕ್ಕೆ ಮೋದಿ ಭಯಪಟ್ಟಿದ್ದಾರೆ ಎಂಬ ಆರೋಪಗಳಿವೆ. ಯಾಕೆಂದರೆ, ಎಪ್‌ಸ್ಟೀನ್ ಫೈಲ್ಸ್ ಹೊರಬಂದ ಕೆಲವೇ ದಿನಗಳಲ್ಲಿ ಮೋದಿ ಅವರು ಅಮೆರಿಕ ಜೊತೆಗಿನ ಮುಕ್ತ ವ್ಯಾಪಾರ ಒಪ್ಪಂದವನ್ನು ಒಪ್ಪಿಕೊಂಡರು. ಅದೂ, ಫೋನ್ ಕರೆಯಲ್ಲಿ. ಜೊತೆಗೆ, ಅಮೆರಿಕಗೆ ಸಂಪೂರ್ಣ ವಿನಾಯತಿ ಮತ್ತು ಭಾರತದ ಮೇಲೆ 18% ಸುಂಕದೊಂದಿದೆ.

ಈ ಎಲ್ಲ ಬೆಳವಣಿಗೆಗಳಿಂದ, ಟ್ರಂಪ್ ಆಡಳಿತವು ಮೋದಿ ಅವರನ್ನು ತನ್ನ ಕೈಗೊಂಬೆಯಂತೆ ಆಡಿಸುತ್ತಿದೆ ಎಂಬಂತೆ ಜಾಗತಿಕವಾಗಿ ಬಿಂಬಿತವಾಗುತ್ತಿದೆ. ಈಗ, ರಷ್ಯಾ ತೈಲ ಖರೀದಿಗೆ ಭಾರತಕ್ಕೆ ಅಮೆರಿಕ ಅನುಮತಿ ನೀಡಿರುವುದು ಜಾಗತಿಕವಾಗಿ ಮೋದಿ ಅವರು ಭಾರತವನ್ನು ಅಮೆರಿಕದ ಪದತಲಕ್ಕಿಟ್ಟಿದ್ದಾರೆ ಎಂಬಂತೆ ಭಾಸವಾಗುತ್ತಿದೆ. ಮೋದಿ ಅವರು ಭಾರತದ ಸಾರ್ವಭೌಮತ್ವ ಮತ್ತು ಘನತೆಗೆ ಧಕ್ಕೆ ತಂದಿದ್ದಾರೆ.

ಭಾರತದಂತಹ ಸ್ವತಂತ್ರ ರಾಷ್ಟ್ರವು ತನ್ನ ಆಂತರಿಕ ಮತ್ತು ಬಾಹ್ಯ ನೀತಿಗಳನ್ನು ಸ್ವತಂತ್ರವಾಗಿ ನಿರ್ಧರಿಸುವ ಹಕ್ಕು ಹೊಂದಿರುತ್ತದೆ. ಭಾರತವು ಬೆಳೆಯುತ್ತಿರುವ ಮಹಾಶಕ್ತಿಯಾಗಿ ಹೊರಹೊಮ್ಮುತ್ತಿರುವಾಗ, ತನ್ನ ವ್ಯಾಪಾರವನ್ನು ಸ್ವತಂತ್ರವಾಗಿ ನಿರ್ವಹಿಸಬೇಕು. ಆದರೆ, ಅಮೆರಿಕದ ಅಂಕೆಗೆ ಭಾರತ ಸಿಲುಕಿಕೊಂಡಿದೆ.

1971ರ ಇಂಡೋ-ಪಾಕ್ ಯುದ್ಧದ ಸಮಯದಲ್ಲಿ ಇಂದಿರಾ ಗಾಂಧಿಯವರು ಅಮೆರಿಕದ ನೆಲದಲ್ಲಿ ನಿಂತು, ''ಯಾವುದೇ ಒಂದು ದೇಶ ಮತ್ತೊಂದು ದೇಶಕ್ಕೆ ಏನು ಮಾಡಬೇಕು ಎಂದು ಹೇಳುವ ಹಕ್ಕಿಲ್ಲ. ಅಮೆರಿಕ ನಮ್ಮ ಸ್ನೇಹಿತನೇ ಹೊರತು, ಬಾಸ್ ಅಲ್ಲ. ಭಾರತ ತನ್ನ ಭವಿಷ್ಯವನ್ನು ತಾನೇ ಬರೆದುಕೊಳ್ಳುತ್ತದೆ'' ಎಂದು ಅಂದಿನ ಅಮೆರಿಕ ಅಧ್ಯಕ್ಷ ರಿಚರ್ಡ್ ನಿಕ್ಸನ್‌ಗೆ ಖಡಕ್ಕಾಗಿ ಹೇಳಿ ಬಂದಿದ್ದರು. ಇಂತಹ ಇತಿಹಾಸದಿಂದ ಮೋದಿ ಪಾಠ ಕಲಿಯಬೇಕಿದೆ. ಭಾರತವನ್ನು ಸ್ವಾಭಿಮಾನಿ ರಾಷ್ಟ್ರವನ್ನಾಗಿ ಮುನ್ನಡೆಸಬೇಕಿದೆ.

ಮಹಿಳಾ ದಿನಾಚರಣೆ ಹೆಣ್ಣಿನ ಆತ್ಮ ಗೌರವದ ದಾಖಲೀಕರಣದ ಅನನ್ಯತೆ

'ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಹಾಸನ'ವು 2026ರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಈ ಬಾರಿ ಹಾಸನದಲ್ಲಿ 'ಮಹಿಳಾ ಚೈತನ್ಯ ದಿನ'ವಾಗಿ ಆಚರಿಸುತ್ತಾ, ಮಹಿಳಾ ಜಾಗೃತಿ ಸಮಾವೇಶವನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಹೊರತರಲಾಗುತ್ತಿರುವ ಸಾಂದರ್ಭಿಕ ಗ್ರಂಥ 'ಹಾಸನ ಮಣ್ಣಿನ ಹೆಣ್ಣು ದನಿಗಳು' ಕೃತಿಗೆ ಸಾಹಿತಿ ಬಾನು ಮುಷ್ತಾಕ್ ಅವರು ಬರೆದ ಮುನ್ನುಡಿ ಇಲ್ಲಿದೆ.

ಹಾಸನ ಎಂದರೆ ಕೇವಲ ಶಿಲ್ಪಕಲೆಯ ಬೀಡಲ್ಲ ಮತ್ತು ಪ್ರವಾಸಿಗರ ಕಣ್ಮನ ತಣಿಸುವ ತಾಣ ಮಾತ್ರವಲ್ಲ. ಅದು ಕೆಚ್ಚೆದೆಯ ಹೆಣ್ಣುಮಕ್ಕಳನ್ನು ಹೆತ್ತ ಪುಣ್ಯಭೂಮಿ ಕೂಡ. ಈ ಮಣ್ಣಿನ ಸತ್ವದಲ್ಲೇ ಒಂದು ವಿಶಿಷ್ಟವಾದ ಗುಣವಿದೆ. ಇಲ್ಲಿನ ಗಾಳಿಯಲ್ಲಿ ಹೊಯ್ಸಳರ ಕಾಲದ ವೀರ ವನಿತೆಯರ ಸ್ಪಂದನವಿದೆ; ಹೊಲಗದ್ದೆಗಳಲ್ಲಿ, ತೋಟಗಳಲ್ಲಿ ದುಡಿಯುವ ತಾಯಂದಿರ ಬೆವರಿನ ಘಮವಿದೆ. ಹಾಸನ ಎಂಬುದು ಇತಿಹಾಸದ ಶಿಲಾಶಾಸನಗಳಲ್ಲಿ ಮಾತ್ರವಲ್ಲ, ಬದುಕಿನ ಉಸಿರಿನಲ್ಲಿ ಕೂಡ ಉಳಿದಿರುವ ಮಣ್ಣು. ಹಾಸನ ಮಣ್ಣಿನ ಹೆಣ್ಣು ದನಿಗಳು ಎಂಬ ಕೃತಿ ಒಂದು ಸಾಂದರ್ಭಿಕ ಪುಸ್ತಕ ಮಾತ್ರವಲ್ಲ; ಅದು ಈ ನೆಲದ ಅಸ್ಮಿತೆಯನ್ನು ಎತ್ತಿ ಹಿಡಿಯುವ ಸಾಂಸ್ಕೃತಿಕ ದಸ್ತಾವೇಜು. ಈ ಕೃತಿಗೆ ಮುನ್ನುಡಿ ಬರೆಯುವುದು ನನ್ನ ಪಾಲಿನ ಹೆಮ್ಮೆ ಮಾತ್ರವಲ್ಲ, ಈ ಮಣ್ಣಿನ ಮಗಳಾಗಿ ನನ್ನ ಕರ್ತವ್ಯವೂ ಹೌದು.

ನಮ್ಮ ಇತಿಹಾಸದ ಪುಟಗಳನ್ನು ಅವಲೋಕಿಸಿದಾಗ ಅನೇಕ ಮಹಿಳಾ ವ್ಯಕ್ತಿತ್ವಗಳು ಕಾಲದ ಗರ್ಭದಲ್ಲಿ ಮರೆಯಾಗಿರುವುದು ಗೋಚರಿಸುತ್ತದೆ. ಅನಾಮಿಕತೆಯ ಸುಳಿಯಲ್ಲಿ ಕರಗಿಹೋಗಿರುವ ಅನೇಕ ಜೀವಿತಗಳು ಮರೆಯಾಗಿ ಹೋಗಿವೆ. ಚರಿತ್ರೆಯು ಬಹುಪಾಲು ಪುರುಷಪ್ರಧಾನವಾಗಿ ದಾಖಲಿಸಲ್ಪಟ್ಟ ಕಾರಣದಿಂದ ಸಮಾಜವನ್ನು ಕಟ್ಟಿ ಬೆಳೆಸಿದ ಎಷ್ಟೋ ಸ್ತ್ರೀಯರ ಹೆಸರುಗಳು ಮತ್ತು ಸಾಧನೆಗಳು ಅಕ್ಷರ ರೂಪಕ್ಕೆ ಬರಲೇ ಇಲ್ಲ. ಆದರೆ ಈ ಕೃತಿ ಆ ಮರೆತುಹೋದ ಬೇರುಗಳನ್ನು ಅರಸಿ ಹೊರಟಿದೆ. ಮಣ್ಣಿನ ಆಳದಲ್ಲಿ ಮೌನವಾಗಿ ಅಡಗಿದ್ದು ಇಡೀ ಮರಕ್ಕೆ ಚೈತನ್ಯ ನೀಡುವ ಬೇರುಗಳಂತೆ ಈ ಮಹಿಳೆಯರು ಸಾಮಾಜಿಕವಾಗಿ ತೊಡಗಿಸಿಕೊಂಡಿದ್ದಾರೆ. ಬೇರುಗಳನ್ನು ಗುರುತಿಸಿ ಇಂದಿನ ಚಿಗುರುಗಳೊಂದಿಗೆ ಬೆಸೆಯುವ ಮಹತ್ವದ ಕಾರ್ಯವನ್ನು ಈ ಗ್ರಂಥ ಸಾಧಿಸಿದೆ.

ಹಾಸನ ಎನ್ನುವುದು ಕೇವಲ ಭೌಗೋಳಿಕ ಗಡಿಯ ಸೂಚಕವಲ್ಲ. ಇದು ಬೆಳೆಗಳ ಹಸಿರು, ಕಾಫಿ ತೋಟಗಳ ಸುವಾಸನೆ, ತೆಂಗಿನ ಮರಗಳ ಅದಮ್ಯ ಚೇತನ, ಹೊಯ್ಸಳರ ಶಿಲ್ಪಕಲೆಯ ಸೌಂದರ್ಯ, ಶಿಕ್ಷಣ ಮತ್ತು ಸಂಸ್ಕೃತಿಯ ಮೃದು ಹರಿವುಗಳ ಸಾಂಸ್ಕೃತಿಕ ಸಂಕಲ್ಪ. ಈ ಮಣ್ಣಿನೊಳಗೆ ಆಳವಾಗಿ ಹರಡಿರುವುದು ಅನೇಕ ಮಹಿಳೆಯರ ಅಸಂಖ್ಯ ಹೆಜ್ಜೆಗಳು. ಮನೆಯೊಳಗೆ ಕುಟುಂಬವನ್ನು ರೂಪಿಸಿದವರು ಅವರು; ಹೊಲಗಳಲ್ಲಿ ಬೆವರಿನ ಮುತ್ತುಗಳಿಂದ ಅನ್ನವನ್ನು ಬೆಳೆದವರು, ಶಾಲೆಗಳಲ್ಲಿ ಅಕ್ಷರದ ದೀಪ ಹಚ್ಚಿದವರು, ಆಸ್ಪತ್ರೆಗಳಲ್ಲಿ ಸೇವೆಯ ಕರ್ತವ್ಯ ನಿರ್ವಹಿಸಿದವರು, ನ್ಯಾಯದ ಹಾದಿಯಲ್ಲಿ ಧ್ವನಿ ಎತ್ತಿದವರು ಈ ಧೀಮಂತ ಮಹಿಳೆಯರು. ಕಲೆ ಮತ್ತು ಸಾಹಿತ್ಯದ ವೇದಿಕೆಯಲ್ಲಿ ಸಮಾಜದ ಅಂತರಂಗವನ್ನು ಪ್ರತಿಬಿಂಬಿಸಿದವರು ಅವರು. ಆದರೆ ಈ ಎಲ್ಲಾ ಬದುಕುಗಳು ಸಮಾನವಾಗಿ ದಾಖಲಾಗಿದೆಯೇ? ಎಂಬ ಪ್ರಶ್ನೆಗೆ ಉತ್ತರವೇ ಇಲ್ಲ.

ಇತಿಹಾಸದ ಪುಟಗಳಲ್ಲಿ ಮಹಿಳೆಯರ ಅನುಪಸ್ಥಿತಿಯು ಅವರ ಸೃಜನಶೀಲ ತೊಡಗುವಿಕೆಯ ನಿರಾಕರಣೆಯಾಗಿದೆ ಮತ್ತು ದುರುದ್ದೇಶಪೂರ್ವಕ ನಿರ್ಲಕ್ಷ್ಯದ ಫಲವಾಗಿದೆ. ಶತಶತಮಾನಗಳಿಂದ ಇತಿಹಾಸ ಬರೆಯುವ ಅಧಿಕಾರವು ಸಾಂಸ್ಕೃತಿಕ ಮತ್ತು ರಾಜಕೀಯ ಶಕ್ತಿಯ ಕೈಯಲ್ಲಿತ್ತು. ಯುದ್ಧಗಳು, ರಾಜಕೀಯ ಬದಲಾವಣೆಗಳು, ಆಡಳಿತದ ಸಾಧನೆಗಳು ಮೊದಲಾದವು ಮಾತ್ರ ಇತಿಹಾಸವೆಂದು ಪರಿಗಣಿಸಲ್ಪಟ್ಟವು. ಮನೆಯೊಳಗಿನ ಶ್ರಮ, ಆರೈಕೆಯ ಕರ್ತವ್ಯ, ಮೌಲ್ಯಗಳನ್ನು ಸಾಗಿಸುವ ಸಂಸ್ಕೃತಿ, ಮಕ್ಕಳ ಮನಸ್ಸುಗಳನ್ನು ರೂಪಿಸುವ ತಾಯಿಯ ಜ್ಞಾನ- ಇವೆಲ್ಲವನ್ನೂ ಆಕೆಯ ಸಹಜ ಕರ್ತವ್ಯವೆಂದು ಬದಿಗಿರಿಸಿ ಸಾಧನೆ ಎಂದು ಗುರುತಿಸಲಿಲ್ಲ.



ಶಿಕ್ಷಣದ ಅವಕಾಶವಿಲ್ಲದೆ, ಆರ್ಥಿಕ ಸ್ವಾತಂತ್ರ್ಯದ ಕೊರತೆಯಲ್ಲಿ, ಸಾಮಾಜಿಕ ನಿರ್ಬಂಧಗಳ ಮಧ್ಯೆ ಬದುಕಿದ ಮಹಿಳೆಯರು ತಮ್ಮ ಕಥೆಯನ್ನು ತಾವೇ ಬರೆಯಲು ಸಾಧ್ಯವಾಗಲಿಲ್ಲ. ಅವರ ಅನುಭವಗಳು ಜನಪದ ಗೀತೆಗಳಲ್ಲಿ, ಹಬ್ಬಗಳ ಆಚರಣೆಗಳಲ್ಲಿ, ಮನೆಯ ಹಿರಿಯರ ಮಾತುಗಳಲ್ಲಿ ಉಳಿದವು; ಆದರೆ ಅಧಿಕೃತ ದಾಖಲಾತಿಗಳಲ್ಲಿ ಸ್ಥಾನ ಪಡೆಯಲಿಲ್ಲ. ಹೀಗಾಗಿ ಮಹಿಳೆಯರ ಇತಿಹಾಸ ಮೌನದ ಇತಿಹಾಸವಾಗಿ ಉಳಿಯಿತು.

ಇಂತಹ ಹಿನ್ನೆಲೆಯಲ್ಲಿ ಹಾಸನ ಮಣ್ಣಿನ ಹೆಣ್ಣು ದನಿಗಳು- ಕೃತಿ ಸಾಂಸ್ಕೃತಿಕ ಪುನರುತ್ಥಾನದ ಸಂಕೇತವಾಗಿ ಕಾಣುತ್ತದೆ. ಇದು ಕೇವಲ ಸಾಧಕರ ಪಟ್ಟಿ ಅಲ್ಲ; ಉದ್ದೇಶಪೂರ್ವಕ ಮರೆವಿನ ವಿರುದ್ಧದ ಪ್ರಜ್ಞಾಪೂರ್ವಕ ಹೋರಾಟ. ಬೇರುಗಳು ಗೋಚರಿಸುವುದಿಲ್ಲ; ಆದರೆ ಅವುಗಳಿಲ್ಲದೆ ಮರವು ಗಗನವನ್ನು ಚುಂಬಿಸುವುದಿಲ್ಲ. ಹಾಗೆಯೇ ಹಾಸನದ ಮಹಿಳೆಯರ ಮೌನ ಶ್ರಮವೇ ಈ ಜಿಲ್ಲೆಯ ಸಾಮಾಜಿಕಸಾಂಸ್ಕೃತಿಕ ಕಟ್ಟಡದ ಆಧಾರ. ಅದಕ್ಕೆ ದನಿಯಾಗುವ ಪ್ರಾಮಾಣಿಕ ಪ್ರಯತ್ನ ಇಲ್ಲಿ ಎದ್ದು ತೋರುತ್ತದೆ.

ಈ ಕೃತಿ ಆ ಕಾಲದ ಸತ್ವಗಳಿಗೆ ಹೆಸರು ಕೊಡುತ್ತದೆ; ಮೌನ ಸಾಧನೆಗಳಿಗೆ ಶಬ್ದ ನೀಡುತ್ತದೆ; ಮರೆಯಾದ ಬದುಕಿಗೆ ಇತಿಹಾಸದ ಬೆಳಕು ಹರಡುತ್ತದೆ. ಹಿಂದಿನ ಸಾಧಕಿಯರ ಮತ್ತು ಇಂದಿನ ಪ್ರೇರಕ ಮಹಿಳೆಯರ ಜೀವನಗಾಥೆಗಳನ್ನು ಒಂದೇ ವಂಶವೃಕ್ಷದಂತೆ ಜೋಡಿಸುತ್ತದೆ. ಇಂದಿನ ಮಹಿಳಾ ಸಾಧಕರು ವಿಜ್ಞಾನ, ವೈದ್ಯಕೀಯ, ಆಡಳಿತ, ಕ್ರೀಡೆ, ಸಾಹಿತ್ಯ, ಉದ್ಯಮಶೀಲತೆ, ಸಾಮಾಜಿಕ ಸೇವೆ ಮುಂತಾದ ಎಲ್ಲ ಕ್ಷೇತ್ರಗಳಲ್ಲಿಯೂ ತಮ್ಮ ಅಸ್ತಿತ್ವವನ್ನು ದೃಢಪಡಿಸುತ್ತಿದ್ದಾರೆ. ಅವರ ಘೋಷಣೆಯ ಹಿಂದೆ ಹಿಂದಿನ ತಲೆಮಾರಿನ ಮಹಿಳೆಯರ ಮೌನ ಮತ್ತು ಸಹನೆಯ ಪ್ರತಿಧ್ವನಿಯಿದೆ. ಈ ಕೃತಿ ಕಾಲಘಟ್ಟಗಳನ್ನು ಸೇರಿಸುವ ಸೇತುವೆ. ಇದು ಪರಂಪರೆ ಮತ್ತು ಪ್ರಗತಿಯನ್ನು ಒಂದೇ ಮಣ್ಣಿನ ಎರಡು ಕವಲುಗಳೆಂದು ಪರಿಗಣಿಸುತ್ತದೆ.

ಯಾವುದೇ ಒಂದು ನಾಡಿನ ಪ್ರಗತಿಯನ್ನು ಅಲ್ಲಿನ ಮಹಿಳೆಯರ ಸ್ಥಿತಿಗತಿಯ ಮೌಲ್ಯಮಾಪನದ ಮೂಲಕ ತಿಳಿಯಬಹುದು. ಈ ಹಿನ್ನೆಲೆಯಲ್ಲಿ ಹಾಸನದ ಮಹಿಳಾ ಶಕ್ತಿಯನ್ನು ದಾಖಲಿಸುವ ಪ್ರಯತ್ನಕ್ಕೆ ಮೂರು ಪ್ರಮುಖ ಆಯಾಮಗಳಿವೆ. ಸ್ಥಳೀಯ ಅಸ್ಮಿತೆಯ ಜಾಗೃತಿ ಕೂಡ ಮುಖ್ಯವಾಗುತ್ತಿದೆ. ಜಾಗತೀಕರಣದ ಅಬ್ಬರದಲ್ಲಿ ನಾವು ನಮ್ಮ ಇತಿಹಾಸ ಮತ್ತು ಸಾಧಕರನ್ನು ಮರೆಯುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಹಾಸನದ ಪ್ರತಿ ಗ್ರಾಮದ ಕಣಕಣದಲ್ಲೂ ಇರುವ ಮಹಿಳಾ ಸಾಧನೆಯನ್ನು ಗುರುತಿಸುವುದು ನಮ್ಮ ಜಿಲ್ಲೆಯ ಆತ್ಮಗೌರವವನ್ನು ಎತ್ತಿಹಿಡಿಯುವ ಕೆಲಸವಾಗಿದೆ. ಹಿಂದಿನ ತಲೆಮಾರಿನ ಸಾಧಕಿಯರಲ್ಲಿದ್ದ ತಾಳ್ಮೆ, ಸೌಜನ್ಯ ಹಾಗೂ ಆಧುನಿಕ ಯುಗದ ಸ್ತ್ರೀಯಲ್ಲಿರುವ ತಾಂತ್ರಿಕ ವೇಗ ಮತ್ತು ಬೌದ್ಧಿಕ ಚುರುಕುತನವನ್ನು ಈ ಚಿಂತನೆಗಳು ಪರಸ್ಪರ ಇಲ್ಲಿ ಸಂಧಿಸುವಂತೆ ಮಾಡಿವೆ. ಇದು ಹಳೆಯ ಬೇರು ಮತ್ತು ಹೊಸ ಚಿಗುರಿನ ಸುಂದರ ಸಂಗಮವಾಗಿದೆ. ಹಾಗೂ ಮುಂಬರುವ ಹೆಣ್ಣುಮಕ್ಕಳಿಗೆ ತಮ್ಮ ನೆಲದ ಶಕ್ತಿಯನ್ನು ಮನವರಿಕೆ ಮಾಡಿಕೊಡುವ ಕೈಪಿಡಿಯಾಗಿದೆ.

ಮಹಿಳೆಯರ ಇತಿಹಾಸವನ್ನು ದಾಖಲಿಸುವುದು ಕೇವಲ ಭೂತಕಾಲದ ಸ್ಮರಣೆ ಅಲ್ಲ; ಅದು ನ್ಯಾಯದ ಮರುಸ್ಥಾಪನೆ. ಒಬ್ಬ ಮಹಿಳೆಯ ಬದುಕಿನ ಹೋರಾಟ ದಾಖಲಾದಾಗ ಆಕೆಯ ಶ್ರಮಕ್ಕೆ ಗುರುತು ಸಿಗುತ್ತದೆ. ಮಾನ್ಯತೆ ಪಡೆದ ಶ್ರಮ ಆತ್ಮಗೌರವವನ್ನು ಹೆಚ್ಚಿಸುತ್ತದೆ; ಆತ್ಮಗೌರವವೇ ಮುಕ್ತಿಯ ಮೊದಲ ಹೆಜ್ಜೆ. ಈ ಗ್ರಂಥದ ಬಿಡುಗಡೆ ಕೂಡ ಒಂದು ರೂಪಕ. ಇದು ಕೇವಲ ಪುಸ್ತಕದ ಅನಾವರಣವಲ್ಲ; ಬಂಧಿತ ಕಥೆಗಳ ಬಿಡುಗಡೆ. ಒಂದು ಬಾರಿ ಮಹಿಳೆಯ ಹೋರಾಟ ಮತ್ತು ಪ್ರತಿರೋಧದ ಕಥೆ ಸಾರ್ವಜನಿಕ ವೇದಿಕೆಗೆ ಬಂದರೆ ಅದು ಸಮಾಜದ ಮನೋಭಾವವನ್ನು ಪ್ರಶ್ನಿಸುತ್ತದೆ. ಸಾಧನೆ ಎಂಬ ಪದದ ಅರ್ಥವನ್ನು ಮರು ಮೌಲ್ಯ ಮಾಡಲು ಒತ್ತಾಯಿಸುತ್ತದೆ; ಮನೆ ಮತ್ತು ಹೊರಜಗತ್ತು ಎಂಬ ಕೃತಕ ವಿಭಜನೆಗಳನ್ನು ತೊಡೆದುಹಾಕುತ್ತದೆ. ಪುಸ್ತಕ ಬಿಡುಗಡೆ ಒಂದು ಸಾಂಸ್ಕೃತಿಕ ವಿಧಿ. ಆದರೆ ಈ ವಿಧಿ ಮಹಿಳೆಯರ ಬಿಡುಗಡೆಯ ಹಾದಿಯಲ್ಲಿ ಒಂದು ಸಂಕೇತಾತ್ಮಕ ಹೆಜ್ಜೆ. ಏಕೆಂದರೆ ಓದಿಸಿಕೊಂಡು ಹೆಸರು ಪಡೆದ ಕಥೆ ಮತ್ತೆ ಮೌನವಾಗುವುದಿಲ್ಲ. ಇತಿಹಾಸದಲ್ಲಿ ಸ್ಥಾನ ಪಡೆದ ಜೀವನ ಮುಂದಿನ ಪೀಳಿಗೆಗೆ ಪ್ರೇರಣೆಯಾಗುತ್ತದೆ. ಒಬ್ಬ ಮಹಿಳೆ ಈ ಪುಸ್ತಕದ ಒಳಗನ್ನು ಅರಿತಾಗ ನನಗೂ ಸಾಧ್ಯ ಎಂಬ ವಿಶ್ವಾಸ ಅವಳ ಅಂತರಂಗದಲ್ಲಿ ನೆಲೆಯಾಗುತ್ತದೆ. ಒಬ್ಬ ಯುವಕ ಇದನ್ನು ಓದಿದಾಗ ಸಮಾನತೆ ನನ್ನ ಹೊಣೆಗಾರಿಕೆ ಎಂಬ ಅರಿವು ಅವನ ಮನದಲ್ಲಿ ಮೂಡುತ್ತದೆ.

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಕಳೆದ 13 ವರ್ಷಗಳಿಂದ ಪ್ರತಿ ವರ್ಷ ಒಂದೊಂದು ಜಿಲ್ಲೆಯಲ್ಲಿ ಮಹಿಳಾ ದಿನವನ್ನು ಆಚರಿಸುತ್ತಿದ್ದು, ಈ ವರ್ಷ ಹಾಸನ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡಿದೆ. ಮಾರ್ಚ್ 7 ಮತ್ತು 8ರಂದು ಬೃಹತ್ ಮಹಿಳಾ ಸಮಾವೇಶವನ್ನು ಹಾಸನದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ಇದು ಕೇವಲ ಒಂದೆರಡು ದಿನದ ಆಚರಣೆ ಮಾತ್ರವಲ್ಲ; ಅದು ಆತ್ಮಪರಿಶೀಲನೆಯ ಕ್ಷಣ. ಈ ಸಂದರ್ಭದಲ್ಲಿ ಕೃತಿಯು ಪ್ರಕಟಗೊಳ್ಳುತ್ತಿರುವುದು ಹಿಸ್ ಸ್ಟೋರಿಗೆ ಪರ್ಯಾಯವಾಗಿ ಹರ್ ಸ್ಟೋರಿ ಕಟ್ಟಿಕೊಡುವ ಧೀಮಂತ ಪ್ರಕ್ರಿಯೆಯಾಗಿದೆ. ನಮ್ಮ ಸಮಾಜದಲ್ಲಿ ಇನ್ನೂ ಅಸಮಾನತೆಗಳಿವೆ, ತಾರತಮ್ಯವಿದೆ, ದೌರ್ಜನ್ಯವಿದೆ. ಆದರೆ ಇಲ್ಲಿ ದಾಖಲಾದ ಪ್ರತಿಯೊಂದು ಜೀವನಾನುಭವವು ಅಸಮಾನತೆಗಳ ವಿರುದ್ಧದ ಮೌನ ಪ್ರತಿರೋಧವಾಗಿದೆ. ಈ ಕೃತಿ ಕೇವಲ ಸ್ಮರಣಿಕೆ ಅಲ್ಲ; ಇದು ಸಾಮಾಜಿಕ ಜಾಗೃತಿಯ ದೀಪ. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಈ ಸಂದರ್ಭವು ಸ್ತ್ರೀಶಕ್ತಿಯ ಆತ್ಮಾವಲೋಕನಕ್ಕೆ, ಸಂಭ್ರಮಕ್ಕೆ ಒಂದು ವೇದಿಕೆಯಾಗಿದೆ. ಆ ನೆವದಲ್ಲೇ ಈ ಕೃತಿ ಬಿಡುಗಡೆಯಾಗುತ್ತಿದೆ. ನಿಜಕ್ಕೂ ಇದು ಸಾಂಕೇತಿಕ ಮಾತ್ರವಲ್ಲ, ಅರ್ಥಪೂರ್ಣ ಕೂಡ.

ಹಾಗೇ ಇದು ಕೇವಲ ಒಂದು ಪುಸ್ತಕದ ಪೂರ್ಣತೆ ಅಲ್ಲ. ಒಂದು ಮೌನ ಇತಿಹಾಸದ ನ್ಯಾಯಪ್ರಾಪ್ತಿ. ಹಾಸನದ ಮಣ್ಣಿನಲ್ಲಿ ಅನೇಕ ದಶಕಗಳಿಂದ ಬೇರು ಬಿಟ್ಟಿದ್ದ ಮಹಿಳಾ ಶ್ರಮಕ್ಕೆ ಈಗ ಶಬ್ದ ಸಿಕ್ಕಿದೆ, ರೂಪ ಸಿಕ್ಕಿದೆ, ಗೌರವ ಸಿಕ್ಕಿದೆ. ದಾಖಲಾಗದ ಬದುಕುಗಳು ಈಗ ದಾಖಲೆಯಾದವು; ಹೆಸರು ಇಲ್ಲದ ಸಾಧನೆಗಳು ಈಗ ಹೆಸರು ಪಡೆದವು. ಎಷ್ಟೊಂದು ಕ್ಷೇತ್ರಗಳಲ್ಲಿ ಹೆಣ್ಣು ತೊಡಗಿಕೊಂಡಿದ್ದರೂ ಅದು ಗೋಚರಿಸುತ್ತಿರಲಿಲ್ಲ. ಈಗ ಎದ್ದು ತೋರುವಂತಾಯ್ತು. ಈ ಕೃತಿ ನಮಗೆ ಒಂದು ಸ್ಪಷ್ಟ ಸಂದೇಶ ನೀಡುತ್ತದೆ: ಮಹಿಳೆಯರ ಇತಿಹಾಸವನ್ನು ಬರೆಯುವುದು ಅಂದರೆ ಸಮಾಜದ ಅರ್ಧ ಆತ್ಮವನ್ನು ಮರುಪಡೆಯುವುದು! ಮಹಿಳೆಯರ ಶ್ರಮ ಮತ್ತು ಸಾಧನೆಗಳನ್ನು ಮಾನ್ಯಗೊಳಿಸಿದಾಗ ಮಾತ್ರ ಸಮಾಜದ ಇತಿಹಾಸ ಸಂಪೂರ್ಣವಾಗುತ್ತದೆ.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಚೌಕಟ್ಟಿನಲ್ಲಿ ಈ ಕೃತಿ ವಿಶೇಷ ಅರ್ಥ ಪಡೆಯುತ್ತದೆ. ಮಹಿಳಾ ದಿನವೆಂದರೆ ಕೇವಲ ಗೌರವ ಸಮಾರಂಭವಲ್ಲ; ಅದು ಸಮಾನತೆಯತ್ತ, ನ್ಯಾಯದತ್ತ, ಅವಕಾಶಗಳ ಸಮಾನ ಹಂಚಿಕೆಯತ್ತ ಸಾಮೂಹಿಕ ಪ್ರತಿಜ್ಞೆ ಮಾಡುವ ಕ್ಷಣ. ಇಂತಹ ದಿನದಲ್ಲಿ ಕೇವಲ ಒಂದು ತಿಂಗಳ ಒಳಗೆ ಸ್ಥಳೀಯ ಮಹಿಳೆಯರು, ಪುರುಷರೊಡಗೂಡಿ ತಮ್ಮದೇ ಜಿಲ್ಲೆಯ ಸಾಧಕಿಯರ, ವಿವಿಧ ಕ್ಷೇತ್ರಗಳಲ್ಲಿ ತಮ್ಮಷ್ಟಕ್ಕೇ ತೊಡಗಿದ್ದ ಮಹಿಳಾ ಬದುಕುಗಳನ್ನು, ಸಾಮುದಾಯಿಕ, ಸಂಘಟನಾತ್ಮಕ, ಸಾಂಸ್ಥಿಕ ಹೆಣ್ಣಿನ ಸಾರಸತ್ವವನ್ನು ಸಂಗ್ರಹಿಸಿ, ಸಂಶೋಧಿಸಿ, ದಾಖಲಿಸಿ ಪುಸ್ತಕ ರೂಪದಲ್ಲಿ ಸಮಾಜಕ್ಕೆ ಅರ್ಪಿಸಿರುವುದು ಒಂದು ಅಪರೂಪದ ಸಾಂಸ್ಕೃತಿಕ ಕ್ರಾಂತಿ! ಇದು ಜಾಗತಿಕ ಮಹಿಳಾ ಹೋರಾಟದ ಮೌಲ್ಯಗಳನ್ನು ಸ್ಥಳೀಯ ನೆಲೆಯೊಂದಿಗೆ ಜೋಡಿಸುವ ಕಾರ್ಯ. ಈ ಪುಸ್ತಕವನ್ನು ರೂಪಿಸಿದ ಮಹಿಳೆಯರ ಶ್ರಮಕ್ಕೆ, ಜೊತೆಗೂಡಿದ ಪುರುಷರ ಸಹಕಾರ, ಸ್ನೇಹವು ಕೂಡಿಯೇ ಮಹಿಳಾ ದಿನದ ನಿಜವಾದ ಅರ್ಥ, ಸ್ಮರಣೆ, ಮಾನ್ಯತೆ ಮತ್ತು ಮುಕ್ತಿಯ ಹಾದಿಯಲ್ಲಿ ಸಮೂಹ ಹೆಜ್ಜೆಯಾಗಿದೆ.

ಅಂಕಿ-ಅಂಶಗಳಾಚೆಗಿನ ಅಂತಃಕರಣ: ಸಾಹಿತ್ಯದ ಆಶಯದಲ್ಲಿ 2026-27ರ ಆಯವ್ಯಯ

ಕರ್ನಾಟಕ ಆಯವ್ಯಯದ ಸಾರವನ್ನು ಕನ್ನಡ ಸಾಹಿತ್ಯದ ವಿವಿಧ ವಚನಕಾರರು, ಕವಿಗಳು ಮತ್ತು ವಿದ್ವಾಂಸರ ಆಶಯಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ವಿದ್ವಾಂಸರ ದರ್ಶನದೊಂದಿಗೆ 'ಕರ್ನಾಟಕ ಮಾದರಿ'ಯನ್ನು ಮಿಳಿತಗೊಳಿಸಲಾಗಿದೆ.

2026-27ನೇ ಸಾಲಿನ ಕರ್ನಾಟಕ ಆಯವ್ಯಯದ ಸಾರವನ್ನು ವಿವಿಧ ವಚನಕಾರರು, ಕವಿಗಳು ಮತ್ತು ವಿದ್ವಾಂಸರ ಆಶಯಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿದರೆ, ಇದು ಕೇವಲ ಅಂಕಿ-ಅಂಶಗಳ ದಾಖಲೆಯಲ್ಲ, ಬದಲಾಗಿ ಸರ್ವರ ಏಳಿಗೆಯನ್ನು ಬಯಸುವ ಒಂದು ಸಾಮಾಜಿಕ ಬದ್ಧತೆಯ ಜೀವಂತ ದಸ್ತಾವೇಜಾಗಿ ಗೋಚರಿಸುತ್ತದೆ.

ಆಯವ್ಯಯದ ಆರಂಭದಲ್ಲಿಯೇ ವಚನಕಾರ್ತಿ ಅಕ್ಕಮ್ಮನವರ ''ಧನಶೀಲ ಮನಶೀಲ ತನುಶೀಲ/ಸರ್ವಮಯ ದೃಕ್ಕಿಂಗೆ ಕಾಂಬುದೆಲ್ಲವು ಶೀಲ/ಇಂತೀ ವ್ರತಸಂಪದವೆಲ್ಲವೂ/ ಅದಾರ ಕುರಿತು ಮಾಡುವನೇಮ/ಎಂಬುದ ತಾನರಿಯಬೇಕು'' ಎಂಬ ವಚನವನ್ನು ಉಲ್ಲೇಖಿಸುವ ಮೂಲಕ, ಸರ್ಕಾರವು ರೂಪಿಸುವ ಯೋಜನೆಗಳು ಮತ್ತು ವಿನಿಯೋಗಿಸುವ ಅನುದಾನಗಳು ಸದುದ್ದೇಶದಿಂದ ಕೂಡಿರಬೇಕು ಹಾಗೂ ಅವು ಯಾರ ಏಳಿಗೆಯನ್ನು ಬಯಸುತ್ತವೆ ಎಂಬ ಸ್ಪಷ್ಟ ಅರಿವು ನಮಗಿರಬೇಕು ಎಂದು ಪ್ರತಿಪಾದಿಸಲಾಗಿದೆ.

ಈ ಜನಕೇಂದ್ರಿತ ಆರ್ಥಿಕ ತತ್ವಕ್ಕೆ ಸರ್ವೋದಯವಾಗಲಿ ಸರ್ವರಲಿ ಎಂಬ ಕವಿವಾಣಿಯು ಸಮಗ್ರ ಅಭಿವೃದ್ಧಿಯ ದೀಕ್ಷೆಯಾಗಿ ಪೂರಕವಾಗಿದೆ. ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯದ ಹಕ್ಕುಗಳ ಕುರಿತು ಚರ್ಚಿಸುವಾಗ ಭೀಷ್ಮನ ತತ್ವವನ್ನು ಉಲ್ಲೇಖಿಸಿ, ''ಹೆಚ್ಚು ಹಾಲು ಕೊಡುವ ಹಸು/ಎಮ್ಮೆಗಳಿಗೆ ಹೆಚ್ಚಿನ ಆರೈಕೆಯ ಅಗತ್ಯವಿರುತ್ತದೆ, ಅವು ಬಡವಾದರೆ ಗೋವಳಿಗನೂ ಸಂಕಷ್ಟಕ್ಕೆ ಸಿಲುಕುತ್ತಾನೆ'' ಎಂದು ಹೇಳುವ ಮೂಲಕ ರಾಜ್ಯದ ತೆರಿಗೆ ಸಂಪನ್ಮೂಲಗಳ ನ್ಯಾಯಯುತ ಹಂಚಿಕೆಗಾಗಿ ಆಗ್ರಹಿಸಲಾಗಿದೆ.

ಆರ್ಥಿಕ ಅಭಿವೃದ್ಧಿಯ ನೈತಿಕತೆಯನ್ನು ವಿವರಿಸಲು ಅಮರ್ತ್ಯ ಸೇನ್ ಅವರ ''ಮಾನವ ಅಭಿವೃದ್ಧಿಯಲ್ಲಿನ ಹೂಡಿಕೆಯನ್ನು ನಿರ್ಲಕ್ಷಿಸಿದ ಆರ್ಥಿಕ ಅಭಿವೃದ್ಧಿಯು ಅಸ್ಥಿರ ಮಾತ್ರವಲ್ಲ ಅನೈತಿಕವಾದುದು'' ಎಂಬ ಪ್ರಮೇಯವನ್ನು ಅಳವಡಿಸಿಕೊಂಡು ಜನಕಲ್ಯಾಣದ ಯೋಜನೆಗಳಿಗೆ ಹೂಡಿಕೆ ಮಾಡಲಾಗಿದೆ. ರಾಜ್ಯದ ಹಿತಾಸಕ್ತಿಗಾಗಿ ನಡೆಸುವ ಹೋರಾಟವನ್ನು ಡಾ.ಬಿ.ಆರ್. ಅಂಬೇಡ್ಕರ್ ಅವರ ಮಾತುಗಳಲ್ಲಿ ''ನ್ಯಾಯವು ನಮ್ಮ ಪರವಾಗಿರುವಾಗ ಈ ಹೋರಾಟದಲ್ಲಿ ನಾವು ಸೋಲಲು ಸಾಧ್ಯವೇ ಇಲ್ಲ ಇದು ಪರಿಪೂರ್ಣ ಅರ್ಥದಲ್ಲಿ ಆಧ್ಯಾತ್ಮಿಕವಾದ ಹೋರಾಟವಾಗಿದೆ'' ಎಂದು ಬಣ್ಣಿಸುವ ಮೂಲಕ ಬಜೆಟ್ ಅನ್ನು ಒಂದು ಸಾಮಾಜಿಕ ನ್ಯಾಯದ ಹೋರಾಟದ ಭಾಗವಾಗಿ ಬಿಂಬಿಸಲಾಗಿದೆ. ಕೃಷಿ ವಲಯದ ಸುಧಾರಣೆಯ ಕುರಿತು ವಚನಕಾರ ಶಿವಲೆಂಕ ಮಂಚಣ್ಣನವರ ''ಧರೆಯ ಕೃಷಿ ಶುದ್ಧವಾಗಿಯಲ್ಲದೆ, ಸಸಿ ಶುದ್ಧವಿಲ್ಲ'' ಎಂಬ ಹೇಳಿಕೆಯು ಕೃಷಿಯೇ ರಾಜ್ಯದ ಅಭಿವೃದ್ಧಿಗೆ ಮೂಲಾಧಾರ ಎಂಬ ನಂಬಿಕೆಯನ್ನು ದೃಢಪಡಿಸುತ್ತದೆ.

ಜಲಸಂಪನ್ಮೂಲಗಳ ರಕ್ಷಣೆಯ ಮಹತ್ವವನ್ನು ಸಾರಲು ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ''ನದಿಗಳು ನಮ್ಮೆಲ್ಲ ಮಾನವಸಮಾಜ ಮತ್ತು ಸಂಸ್ಕೃತಿಗಳ ಜೀವವಾಹಿನಿ. ಅವು ಕೊಳಕಾದರೆ, ಅವು ಬತ್ತಿದರೆ ನಮ್ಮ ಉಸಿರು ಉಡುಗುತ್ತಾ ಬಂದಂತೆ'' ಎಂಬ ಎಚ್ಚರಿಕೆಯನ್ನು ಮನಗಂಡು ನೀರಾವರಿ ಯೋಜನೆಗಳಿಗೆ ಆದ್ಯತೆ ನೀಡಲಾಗಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಯ ವಿಭಾಗದಲ್ಲಿ ಬಿ.ಎಂ. ಬಶೀರ್ ಅವರ ''ಗುಲಾಬಿಯೆಂದರೆ ಅಮ್ಮನಿಗೆ ಇಷ್ಟ ಗೊತ್ತು ಅವಳಿಗೆ ಮುಳ್ಳಲ್ಲಿ ಅರಳುವ ಕಷ್ಟ'' ಎಂಬ ಕವನದ ಸಾಲುಗಳ ಮೂಲಕ ಮಹಿಳೆಯರ ಸಬಲೀಕರಣದ ಹಿಂದಿರುವ ಸರ್ಕಾರದ ಸಂವೇದನಾಶೀಲತೆಯನ್ನು ವ್ಯಕ್ತಪಡಿಸಲಾಗಿದೆ. ಸಮಾಜ ಕಲ್ಯಾಣದ ಅಡಿಯಲ್ಲಿ ದಲಿತ ಕವಿ ಸಿದ್ದಲಿಂಗಯ್ಯನವರ ''ಕುರಿಗಳ ಕಾಯುವ ಕುರುಬನ ಕೂಗು ಜನರ ಮಾತು ಕವನ'' ಎಂಬ ಉಲ್ಲೇಖವು ಅಂಚಿಗೆ ತಳ್ಳಲ್ಪಟ್ಟ ವರ್ಗಗಳ ಧ್ವನಿಗೆ ಈ ಬಜೆಟ್ ಪೂರಕವಾಗಿದೆ ಎಂಬುದನ್ನು ಸೂಚಿಸುತ್ತದೆ. ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಬಿ.ಆರ್. ಲಕ್ಷ್ಮಣರಾವ್ ಅವರ ''ಮಾನವತೆಯ ಕಟ್ಟಡಕ್ಕೆ ಪ್ರೀತಿಯೊಂದೇ ಇಟ್ಟಿಗೆ, ಇಟ್ಟಿಗೆಗಳ ಬೆಸೆಯಬೇಕು ಕರುಣೆ ಸ್ನೇಹದೊಟ್ಟಿಗೆ'' ಎಂಬ ಸಾಲುಗಳ ಮೂಲಕ ಸಾಮಾಜಿಕ ಸಾಮರಸ್ಯದ ಸಂದೇಶ ಸಾರಲಾಗಿದೆ.

ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಗತಿಯನ್ನು ಪ್ರತಿಪಾದಿಸಲು ರಾಷ್ಟ್ರಕವಿ ಕುವೆಂಪು ಅವರ ''ಹಳಮತದ ಕೊಳೆಯಲ್ಲಿ ಹೊಸಮತಿಯ ಹೊಳೆಯಲ್ಲಿ ಕೊಚ್ಚಿಹೋಗಲಿ; ಬರಲಿ ವಿಜ್ಞಾನ ಬುದ್ಧಿ'' ಎಂಬ ಆಶಯದಂತೆ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಉತ್ತೇಜನ ನೀಡಲಾಗಿದೆ.

ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಬಲವರ್ಧನೆಗಾಗಿ ದಿನಕರ ದೇಸಾಯಿಯವರ ''ಜನಮನದ ನುಡಿಯಾಗಿ ಬಾಳು ತಾಯಿ, ಮೂಕ ಜನರಿಗೂ ಕೂಡ ಬರಲಿ ಬಾಯಿ'' ಎಂಬ ಆಶಯಕ್ಕೆ ಬದ್ಧವಾಗಿ ಕನ್ನಡದ ಅಸ್ಮಿತೆಯನ್ನು ಎತ್ತಿಹಿಡಿಯಲು ಯೋಜಿಸಲಾಗಿದೆ. ಹೀಗೆ, ಪ್ರತಿಯೊಂದು ವಲಯದ ಅಭಿವೃದ್ಧಿಯು ಮಹಾನ್ ವಿದ್ವಾಂಸರ ದರ್ಶನದೊಂದಿಗೆ ಮಿಳಿತಗೊಂಡು ಕರ್ನಾಟಕ ಮಾದರಿಯ ಸಶಕ್ತ ಮತ್ತು ಸುಸ್ಥಿರ ಆರ್ಥಿಕತೆಯನ್ನು ರೂಪಿಸುವ ಗುರಿಯನ್ನು ಈ ಆಯವ್ಯಯ ಹೊಂದಿದೆ.

ಕುವೆಂಪು ವಿಶ್ವವಿದ್ಯಾಲಯದಿಂದ ಕನ್ನಡ ವಿಷಯದಲ್ಲಿ ಸ್ನಾತಕೋತ್ತರ ಪದವಿ, ಕನ್ನಡ ಪತ್ರಿಕೋದ್ಯಮದಲ್ಲಿ ಡಿಪ್ಲೊಮೋ ಪದವಿ, 'ಕನ್ನಡ ಮಹಾಭಾರತ ಕಾವ್ಯಗಳಲ್ಲಿ ಪ್ರಭುತ್ವ, ಯುದ್ಧ ಮತ್ತು ಜನತೆ' ಎಂಬ ವಿಷಯದಲ್ಲಿ ಪಿಎಚ್.ಡಿ. ಪದವಿ ಪಡೆದಿದ್ದಾರೆ. 'ಪರ್ಯಾಯ' ಎಂಬ ವಿಮರ್ಶಾ ಲೇಖನಗಳ ಸಂಕಲನ, 'ಶಾಸನ ಓದು', 'ವಿಮರ್ಶೆ ಓದು' ಪುಸ್ತಕಗಳು ಪ್ರಕಟಗೊಂಡಿವೆ. ಯುದ್ಧ ಪರಿಕಲ್ಪನೆಯನ್ನು ಪ್ರಧಾನ ಆಶಯವನ್ನಾಗಿಟ್ಟುಕೊಂಡ 'ಸಮರ ವ್ಯಾಪಾರ' ಎಂಬ ಪುಸ್ತಕ ಮುದ್ರಣ ಹಂತದಲ್ಲಿದೆ. ಶಾಸ್ತ್ರೀಯ ಕನ್ನಡ ಸಾಹಿತ್ಯ ಇವರ ಆಸಕ್ತಿ ಕ್ಷೇತ್ರವಾಗಿದೆ.

ಕುವೆಂಪು ವಿಶ್ವವಿದ್ಯಾಲಯದಿಂದ ಕನ್ನಡ ವಿಷಯದಲ್ಲಿ ಸ್ನಾತಕೋತ್ತರ ಪದವಿ, ಕನ್ನಡ ಪತ್ರಿಕೋದ್ಯಮದಲ್ಲಿ ಡಿಪ್ಲೊಮೋ ಪದವಿ, 'ಕನ್ನಡ ಮಹಾಭಾರತ ಕಾವ್ಯಗಳಲ್ಲಿ ಪ್ರಭುತ್ವ, ಯುದ್ಧ ಮತ್ತು ಜನತೆ' ಎಂಬ ವಿಷಯದಲ್ಲಿ ಪಿಎಚ್.ಡಿ. ಪದವಿ ಪಡೆದಿದ್ದಾರೆ. 'ಪರ್ಯಾಯ' ಎಂಬ ವಿಮರ್ಶಾ ಲೇಖನಗಳ ಸಂಕಲನ, 'ಶಾಸನ ಓದು', 'ವಿಮರ್ಶೆ ಓದು' ಪುಸ್ತಕಗಳು ಪ್ರಕಟಗೊಂಡಿವೆ. ಯುದ್ಧ ಪರಿಕಲ್ಪನೆಯನ್ನು ಪ್ರಧಾನ ಆಶಯವನ್ನಾಗಿಟ್ಟುಕೊಂಡ 'ಸಮರ ವ್ಯಾಪಾರ' ಎಂಬ ಪುಸ್ತಕ ಮುದ್ರಣ ಹಂತದಲ್ಲಿದೆ. ಶಾಸ್ತ್ರೀಯ ಕನ್ನಡ ಸಾಹಿತ್ಯ ಇವರ ಆಸಕ್ತಿ ಕ್ಷೇತ್ರವಾಗಿದೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR